International Journal of Kannada Research
www.kannadajournal.com

ISSN: 2454–5813
IJKR 2021; 7(1): 92-99
© 2021 IJKR
www.kannadajournal.com
Received: 18-11-2020
Accepted: 20-12-2020

**ಶ್ರೀಮತಿ. ಕವಿತಾ ಬಿ**
ಸಹಾಯಕ ಪ್ರಾಧ್ಯಾಪಕರು,
ಸಂಸ್ಕೃತ ವಿಭಾಗ ಶೇಷಾದ್ರಿಪುರಂ ವಾಣಿಜ್ಯ ಮತ್ತು ನಿರ್ವಹಣಾ ಸಂಸ್ಥೆ, ಶೇಷಾದ್ರಿಪುರಂ,
ಬೆಂಗಳೂರು, ಕರ್ನಾಟಕ, ಭಾರತ

Corresponding Author:
**ಶ್ರೀಮತಿ. ಕವಿತಾ ಬಿ**
ಸಹಾಯಕ ಪ್ರಾಧ್ಯಾಪಕರು,
ಸಂಸ್ಕೃತ ವಿಭಾಗ ಶೇಷಾದ್ರಿಪುರಂ ವಾಣಿಜ್ಯ ಮತ್ತು ನಿರ್ವಹಣಾ ಸಂಸ್ಥೆ, ಶೇಷಾದ್ರಿಪುರಂ,
ಬೆಂಗಳೂರು, ಕರ್ನಾಟಕ, ಭಾರತ

# ಜೈನಧರ್ಮ ಸಮನ್ವಯತೆ– 'ವೈದಿಕಧರ್ಮ: ಲೌಕಿಕತೆ–ಅಲೌಕಿಕತೆ'

**ಶ್ರೀಮತಿ. ಕವಿತಾ ಬಿ**

**ಪೀಠಿಕೆ :–** ಮನುಷ್ಯರ ಜೀವನದಲ್ಲಿ ಧರ್ಮವೆಂಬುದು ಅತ್ಯಂತ ಸೂಕ್ಷ್ಮವಾದ ಮತ್ತು ಸಂವೇದನಾತ್ಮಕವಾದ ಅತಿಮುಖ್ಯ ಸಂಗತಿ. 'ಧಾರಯತೀತಿ ಧರ್ಮಃ' ಎಂಬಂತೆ ಜೀವನದಲ್ಲಿ ಧಾರಣೆಗೆ ಯೋಗ್ಯವಾದುದೇ ಧರ್ಮ. ಅಂದರೆ. ನಿತ್ಯಜೀವನದಲ್ಲಿ ನಾವು ನಿರ್ವಹಿಸಬೇಕಾದ ಕರ್ತವ್ಯ, ನೀತಿ–ನಿಯಮಗಳನ್ನು ತಿಳಿಸಿಕೊಡುವುದೇ ಧರ್ಮವೆಂಬ ಶ್ರೇಷ್ಠಮಾರ್ಗ. ಧರ್ಮವೆಂಬುದು ನಮ್ಮಲ್ಲಿ ಸಚ್ಚಾರಿತ್ರ್ಯವನ್ನು ಬೆಳೆಸಿ ಮಾರ್ಗದರ್ಶನ ನೀಡುವ ಜೀವನಬೋಧಕ. ಇಂತಹ ಧರ್ಮವು ಆಯಾ ಸಂಸ್ಕೃತಿ ಮತ್ತು ಸಾಹಿತ್ಯದ ಮೇಲೂ ಪ್ರಭಾವಯುತವಾಗಿದ್ದು, ತನ್ನ ಯಥೇಚ್ಛವಾದ ಛಾಪನ್ನು ಮೂಡಿಸುವ ಮೂಲಕ ಸಾಮಾಜಿಕ ದೃಢತೆಯನ್ನು ಹೆಚ್ಚಿಸುತ್ತದೆ. ನಮ್ಮ ಭಾರತೀಯಸಾಹಿತ್ಯವು ಸಾವಿರಾರು ವರ್ಷಗಳ ಭವ್ಯೇತಿಹಾಸವನ್ನು ಹೊಂದಿರುವ ಶ್ರೀಮಂತ ವಾಙ್ಮಯಸಾಗರವಾಗಿದೆ. ಯುಗಯುಗಾಂತರಗಳಿಂದ ಕಾಲಾನುಸಾರ ಕ್ರಮಕ್ರಮವಾಗಿ ಬೆಳೆಯುತ್ತಾ ಬಂದು ಪುಷ್ಟಿಗೊಂಡು ಜ್ಞಾನ–ವಿಜ್ಞಾನಗಳೆಂಬ ಸಮೃದ್ಧ ಶಾಖೆಗಳೊಂದಿಗೆ ಸರ್ವರಿಗೂ ಆಶ್ರಯಭೂತವಾದ ಹೆಮ್ಮರವಾಗಿ ಬೆಳೆದು ನಿಂತಿದೆ. ಜೊತೆಗೆ ವಿವಿಧ ಕೃತಿಗಳೆಂಬ ರಸವತ್ಫಲಗಳಿಂದ ಶೋಭಾಯಮಾನವಾಗಿದೆ. ಬಗೆಬಗೆಯಾದ ಕಾವ್ಯಫಲಗಳ ಮಾಧುರ್ಯಗಳಿಂದ ಸಹೃದಯರ ಮನಸ್ಸನ್ನು ಸಮಾಕರ್ಷಿಸುವುದರ ಜೊತೆಗೆ ನಾನಾವಿಧವಾದ ವರ್ಣನಾವೈಖರಿಗಳಿಂದಲೂ ಮತ್ತು ರಸಭಾವಗಳ ಪ್ರದರ್ಶನಗಳಿಂದಲೂ ಉಕ್ತಿಚಾತುರ್ಯಗಳಿಂದಲೂ ಜ್ಞಾನಪಿಪಾಸುಗಳ ಜ್ಞಾನದಾಹವನ್ನು ನಿವಾರಿಸುತ್ತಾ ಸರ್ವರ ಹೃನ್ಮನಗಳನ್ನು ತಣಿಸುತ್ತಿರುವುದು ಸರ್ವವಿದಿತ.

ಕನ್ನಡಸಾಹಿತ್ಯೇತಿಹಾಸದಲ್ಲಿಯೂ ವಿಶೇಷವಾಗಿ ವೈದಿಕಧರ್ಮ ಮತ್ತು ಜೈನಧರ್ಮಗಳ ಒಡಂಬಡಿಕೆಯನ್ನು ಸೂಕ್ಷ್ಮವಾಗಿಯೂ, ಸಮಗ್ರವಾಗಿಯೂ ಅಭ್ಯಸಿಸುವುದರ ಮೂಲಕ ನಮಗೆ ಭಾರತೀಯಸಾಹಿತ್ಯದ ಅಮೋಘಪರಂಪರೆಯ ವಿಶಿಷ್ಟಾನುಭವ ಲಭ್ಯವಾಗುತ್ತದೆ. ಹಲವಾರು ವಿಚಾರಗಳಲ್ಲಿನ ಸಾಮ್ಯತೆ ಹಾಗೂ ಕೆಲವಾರು ವಿಚಾರಗಳಲ್ಲಿನ ಭಿನ್ನತೆಯ ನಡುವೆಯೂ ಇವೆರಡೂ ಧರ್ಮಗಳ ಮತ್ತವುಗಳ ಪುರಾಣಸಾಹಿತ್ಯಗಳ ಉಗಮ ಮತ್ತು ವಿಕಾಸಗಳ ನಡುವಿನ ಅವಿನಾಭಾವಸಂಗತಿಗಳು ನಮ್ಮಲ್ಲಿ ಲೋಕೋತ್ತರವಾದ ಜೀವನಾನುಭೂತಿಯನ್ನು ಸ್ಫುರಿಸುವಲ್ಲಿ ಯಶಸ್ವಿಯಾಗಿವೆ.

ಕನ್ನಡ ಸಾಹಿತ್ಯದಲ್ಲಿ ಅಂತರ್ಶಿಸ್ತೀಯಾಧ್ಯಯನಗಳು ಅತ್ಯಂತ ವಿಶಿಷ್ಟವಾಗಿದ್ದು, ಪ್ರಸ್ತುತ ಲೌಕಿಕಾಲೌಕಿಕಸಾಹಿತ್ಯದಲ್ಲೂ ಪುರಾಣಗಳ ಪರಿಕಲ್ಪನೆಯಲ್ಲಿ ಸಾಂಪ್ರದಾಯಿಕ ಸಿದ್ಧಾಂತಗಳ ಜೊತೆಗೆ, ಆಧುನಿಕ ಚಿಂತನ–ಮಂಥನಗಳಿಗೂ ಸ್ವಾಗತಾರ್ಹ ಅವಕಾಶಗಳುಂಟು. ಇಂತಹ ಸೈದ್ಧಾಂತಿಕ ಅಧ್ಯಯನದಿಂದ ಮೂಲಕೃತಿಗಳ ಬಗೆಗೆ ಅಧ್ಯಯಾನಾಸಕ್ತಿ ವೃದ್ಧಿಯಾಗುತ್ತದೆ. ಸಾಹಿತ್ಯಕ್ಕೂ ಪುರಾಣಕ್ಕೂ ನಿಕಟ ಸಂಬಂಧವಿದ್ದು; ಸಾಹಿತ್ಯವು ತನಗೆ ಬೇಕಾದ ವಸ್ತುವಿಷಯವನ್ನು ಪುರಾಣದಿಂದ ಪಡೆದುಕೊಂಡು, ವಿಶಿಷ್ಟ ಘಟ್ಟದಲ್ಲಿ ಎರಡರ ನಡುವೆ ಸಾಮರಸ್ಯದ ಸಮನ್ವಯತೆಯನ್ನುಂಟುಮಾಡುತ್ತದೆ. ಅದರಂತೆ, ವೈದಿಕ ಮತ್ತು ಜೈನಧರ್ಮದ ಪುರಾಣಗಳು ಅನೇಕ ಬಗೆಯ ವಸ್ತುವಿನ್ಯಾಸಗಳನ್ನು ಒಳಗೊಂಡಿದ್ದು, ಸೂಕ್ಷ್ಮಪಠ್ಯಪೂರಣ (ಲೌಕಿಕ) ಮತ್ತು ಸ್ಥೂಲಪಠ್ಯಪೂರಣ (ಅಲೌಕಿಕ) ವೆಂಬ ಸ್ತರದಲ್ಲಿ ವಿದಿತವಾಗುತ್ತದೆ. ಉದಾಹರಣೆಗೆ: ಜಿನಸೇನರ 'ಪೂರ್ವಪುರಾಣ'ವು ಸ್ಥೂಲಪಠ್ಯವಾದರೆ; ಪಂಪನ 'ಆದಿಪುರಾಣ'ವು ಸೂಕ್ಷ್ಮಪಠ್ಯವಾಗುತ್ತದೆ. ಅದರಂತೆ, ವ್ಯಾಸರ 'ಮಹಾಭಾರತ'ವು ಸ್ಥೂಲಪಠ್ಯವಾದರೆ; ನಾರಣಪ್ಪನ 'ಗದುಗಿನ ಭಾರತ' ಸೂಕ್ಷ್ಮಪಠ್ಯವಾಗುತ್ತದೆ. ಇಲ್ಲಿ ಕೃತಿಯ ಸಾಂಸ್ಕೃತಿಕ ಗ್ರಹಿಕೆಯ ಸ್ವರೂಪವನ್ನು ಕಲಾಕೇಂದ್ರಿತ ದೃಷ್ಟಿಯಲ್ಲಾದ ಪರಿವರ್ತನೆಯನ್ನು ಗುರುತಿಸಬಹುದು. ಈ ಮೂಲಕ ವೈದಿಕ ಮತ್ತು ಜೈನಧರ್ಮ ವಿಚಾರಗಳ ಒಡಂಬಡಿಕೆಯನ್ನು ತಿಳಿಯಬಹುದು.

***ವೈದಿಕಧರ್ಮ ಮತ್ತು ಜೈನಧರ್ಮದಲ್ಲಿನ ಪರಿಕಲ್ಪನೆಗಳು :–**

ವೇದವಾಙ್ಮಯವು ಬಹಳ ವ್ಯಾಪಕವೂ, ಮಹತ್ತ್ವಪೂರ್ಣವೂ ಆಗಿದ್ದು, ಇದರ ಶಾಖೋಪಶಾಖೆಗಳ ಅಧ್ಯಯನ ಅತ್ಯಂತ ಸ್ಥೂಲವಾದುದು.

ಗೌಣಾರ್ಥದಲ್ಲಿ ವೇದವೆಂಬುದು ಜ್ಞಾನಪ್ರತಿಪಾದಕವಾದ ಗ್ರಂಥವೆಂದಾಗುತ್ತದೆ. ಮಾಧವಾಚಾರ್ಯರು ತಮ್ಮ 'ವೇದಾರ್ಥಪ್ರಕಾಶ'ದಲ್ಲಿ — "ಇಷ್ಟಪ್ರಾಪ್ತ್ಯನಿಷ್ಟಪರಿಹಾರಯೋಃ ಅಲೌಕಿಕಮುಪಾಯಮ್ ಯೋ ಗ್ರಂಥಃ ವೇದಯತಿ ಸ ವೇದಃ । ಅಲೌಕಿಕಪದೇನ ಪ್ರತ್ಯಕ್ಷಾನುಮಾನೇ ವ್ಯಾವರ್ತ್ಯೇತೇ ।" ಎಂದು ವಿವರಿಸಿದ್ದಾರೆ. ಸಂಸಾರವೆಂಬ ಜನನ–ಮರಣಗಳ ಚಕ್ರಪರಿವರ್ತನೆಯ ಅನಿಶ್ಚಿತತೆಯನ್ನು ಪರಿಹರಿಸಿ, ಪರಬ್ರಹ್ಮಪ್ರಾಪ್ತಿಯನ್ನುಂಟು ಮಾಡುವ ಅನನ್ಯ ವಿಧಾನವೇ ವೇದಗಳು. ಇದೊಂದು ಬ್ರಹ್ಮಪ್ರತಿಪಾದಕವಾದ ಶಬ್ದ. ಋಷಿಗಳು ತಮ್ಮ ತಮ್ಮ ತಪಶ್ಶಕ್ತಿಯಿಂದ ಸಾಕ್ಷಾತ್ಕರಿಸಿಕೊಂಡಿರುವುದೇ ವೇದಗಳು. ಹಾಗಾಗಿಯೇ ಅವರು ಮಂತ್ರದ್ರಷ್ಟಾರರಾದರು. ಸಾಕ್ಷಾತ್ಕೃತ ಋಷಿಗಳಿಂದ ಶಿಷ್ಯೋಪಾಧ್ಯಾಯಿಕವಾಗಿ ತಿಳಿದುಕೊಂಡವರು 'ಶ್ರುತರ್ಷಿ'ಗಳಾದರು. ಮುಂದಿನ ಜನಾಂಗದದಲ್ಲಿ ಅನುಸ್ಯೂತವಾಗಿ ಮುಂದುವರೆಯಲೆಂದು ವಾಗ್ವ್ಯವಹಾರಕ್ಕನುಗುಣವಾಗಿ ವಿಭಜಿಸಿ ನೀಡಲಾಯಿತು. ವೇದವನ್ನಾಧರಿಸಿ ಬೆಳೆದು ಬಂದಿರುವ ವಿಶಿಷ್ಟವಿಚಾರಗಳು ವೈದಿಕಧರ್ಮದ ಸಾರಭೂತಾಂಶವಾಗಿವೆ.

ವೈದಿಕಸಾಹಿತ್ಯದ ಅತ್ಯಂತ ಬೃಹದಾಕರದ ಅಧ್ಯಯನಶಾಖೆ ಎಂದರೆ ಉಪನಿಷತ್ತುಗಳು ಅಥವಾ ವೇದಾಂತಗಳು. ಅಮೂಲ್ಯವಾದ ಬ್ರಹ್ಮವಿದ್ಯೆಯನ್ನು ಉಜ್ವಲವಾಗಿ ಬೆಳೆಸಿಕೊಳ್ಳಬಲ್ಲ ನಿಷ್ಠಾವಂತ ಜ್ಞಾನಪಿಪಾಸುಗಳಿಗೆ ನಿರ್ವಾಂಚನೆಯಿಂದ ಧಾರೆಯೆರೆಯಲ್ಪಡುವ ಆದರ್ಶಗಳು ಉಪನಿಷತ್ತುಗಳಲ್ಲಿ ಅಡಕವಾಗಿವೆ. ಮಾನವಜೀವನದ ಮತ್ತು ವಿಶ್ವಕಾರಣದ ವಿಚಾರದಲ್ಲಿ ವಿವೇಚನೆ ನಡೆಸುವ ಇವು ಆಧ್ಯಾತ್ಮಿಕಭಾವನೆಗಳ ಇತಿಹಾಸದಲ್ಲಿ ಅತಿಮುಖ್ಯವಾದ ಪ್ರಘಟ್ಟವಾಗಿವೆ. ಈ ಲೋಕದಲ್ಲಿ ನಮ್ಮ ದಿನನಿತ್ಯದ ವ್ಯವಹಾರಕ್ಕೆ ಗೋಚರವಾಗುತ್ತಿರುವ ವಿಚಾರಗಳೂ, ಸುಖ–ದುಃಖಗಳೂ ಇಲ್ಲಿ ಜಿಜ್ಞಾಸೆಗೆ ಒಳಪಡುತ್ತವೆ. ಆತ್ಮಾನ್ವೇಷಣೆ ಮತ್ತು ಸತ್ಯಸಾಕ್ಷಾತ್ಕಾರದ ಮಹತ್ತ್ವವು ಪ್ರಧಾನವಾಗಿ ಇಲ್ಲಿ ಗೋಚರಿಸುತ್ತದೆ. ಭಾರತೀಯದರ್ಶನದ ಮೂಲವಿಷಯವಾದ ಬ್ರಹ್ಮ ಮತ್ತು ಆತ್ಮವಿಚಾರಗಳು ಇಲ್ಲಿ ವಿವರಿಸ್ಪಟ್ಟಿವೆ.

"ಅಸತೋ ಮಾ ಸದ್ಗಮಯ ।
ತಮಸೋ ಮಾ ಜ್ಯೋತಿರ್ಗಮಯ ।

ಮೃತ್ಯೋರ್ಮಾ ಅಮೃತಂಗಮಯ ॥ (ಬೃಹದಾರಣ್ಯಕೋಪನಿಷತ್– ೧.೩.೨೭) ಎಂಬ ಸಾರ್ವಕಾಲಿಕ ಸತ್ಯ ಮತ್ತು ಜ್ಞಾನಪಿಪಾಸೆ ಇಲ್ಲಿ ಸ್ಪಷ್ಟವಾಗಿದೆ.

***ಬ್ರಹ್ಮ :–**

ವೈದಿಕಧರ್ಮಾನುಸಾರ ಜಗತ್ಕಾರಣವಾದ ಪರವಸ್ತುವನ್ನು ಸತ್, ಆತ್ಮಾ, ಬ್ರಹ್ಮ, ಅಕ್ಷರ, ಆಕಾಶ ಮುಂತಾದ ನಾನಾ ಹೆಸರುಗಳಿಂದ ಕರೆಯಲಾಗುತ್ತದೆ. ಸಮಸ್ತಲೋಕಗಳ ವ್ಯವಹಾರಗಳೂ ಈ ಬ್ರಹ್ಮವಸ್ತುವಿಗೆ ಧೀನವಾಗಿವೆಯೆಂದೂ, ಇದರಿಂದಲೇ ಲೋಕಗಳ ಸೃಷ್ಟಿ, ಸ್ಥಿತಿ ಮತ್ತು ಲಯಗಳೆಂದೂ ಸಾರಲಾಗಿದೆ. ಸರ್ವಕಾರಣಕ್ಕೂ ಕಾರಣನಾದ ಪರಮಾತ್ಮನು ಸರ್ವವನ್ನತಿಶಯಿಸಿದವನೂ, ನಿಸ್ಸಮಾಭ್ಯಧಿಕನೂ, ಸರ್ವಶಕ್ತನೂ ಆಗಿದ್ದು, ಮಹತ್ತಿಗಿಂತ ಮಹತ್ತಮನೂ, ಅಣುವಿಗಿಂತ ಅಣುವೂ ಆಗಿ, ಸರ್ವಭೂತಗಳ ಅಂತರಾತ್ಮನಾಗಿರುತ್ತಾನೆ. ಸರ್ವವನ್ನೂ ವ್ಯಾಪಿಸಿರುವ ಇವನು ಎಲ್ಲರ ಹೃದಯಗುಹೆಯನ್ನು ಪ್ರವೇಶಿಸಿರುವ ದುರ್ದರ್ಶನಾಗಿದ್ದಾನೆ. ಸರ್ವಭೂತಗಳೊಳಗೂ ವಾಸಿಸುವ ಇವನು ಎಲ್ಲಾ ಭೂತಜಾತಕಗಳೊಳಗೇ ಇದ್ದರೂ ಇವನನ್ನರಿಯೆವು ನಾವು. ಸರ್ವಭೂತಗಳೂ ಇವನಿಗೆ ಶರೀರವಾಗಿದ್ದು, ಸರ್ವಾತ್ಮರಿಗೂ ಈಶ್ವರನಾಗಿದ್ದು, ಪಾಪ, ಜರಾ, ಮೃತ್ಯು, ಶೋಕ, ಹಸಿವು ಮತ್ತು ಬಾಯಾರಿಕೆಗಳಿಂದ ದೂರನಾದ ಪೂರ್ಣಕಾಮನೂ, ಸತ್ಯಸಂಕಲ್ಪನೂ, ಶಾಶ್ವತನೂ, ಮಂಗಳಕರನೂ, ಅಚ್ಯುತನೂ ಆಗಿದ್ದು; ಸತ್ಯಸ್ವರೂಪನೂ, ಜ್ಞಾನಸ್ವರೂಪನೂ, ಆದ್ಯಂತನೂ, ನಿರ್ವಿಕಾರನೂ, ಶಾಂತನೂ, ನಿರ್ಗುಣನೂ ಆಗಿದ್ದು, ತನ್ನನ್ನು ಭಕ್ತಿಯಿಂದ ಭಜಿಸುವ ಭಕ್ತರಿಗೆ ಪರಮಫಲವನ್ನು ನೀಡುವ ಸೇತುವಾಗಿದ್ದಾನೆ.

***ಸೃಷ್ಟಿ :–**

ನಾನಾವಿಧವಾದ ಈ ರೂಪಾತ್ಮಕವಾದ ವಿಚಿತ್ರ ಮತ್ತು ವಿಭಿನ್ನ ಜಗತ್ತನ್ನು ಸೃಷ್ಟಿಸಿದವನು ಪರಮಾತ್ಮನೇ. ಸಚ್ಛಬ್ದವಾಚ್ಯನಾದ ಪರಮಾತ್ಮನೇ ಈ ಪ್ರಪಂಚದ ಸೃಷ್ಟಿಗೂ ಮೊದಲಿಗ. 'ಸದೇವಸೋಮ್ಯೇದಮಗ್ರ ಆಸೀದೇಕಮೇವಾದ್ವಿತೀಯಂ' ಎಂಬ ಛಾಂದೋಗ್ಯೋಪನಿಷತ್ತಿನ ವಾಕ್ಯದಂತೆ ಬ್ರಹ್ಮ ಒಂದೇ ಇತ್ತೆಂದು ಗೋಚರಿಸುತ್ತದೆ. ನಾಮರೂಪಗಳನ್ನು ಹೊಂದಿರುವ ಈ ಜಗತ್ತೂ ಬ್ರಹ್ಮವಾಗಿತ್ತೆಂದೂ, ಸಕಲಭೂತಜಾತಗಳ ಮೂಲವೆಂದೂ ವಿವರಿಸುತ್ತದೆ. ಬ್ರಹ್ಮವಸ್ತುವಿಗಿಂತ ಬೇರೊಂದು ವಸ್ತುವಿಲ್ಲವೆಂದು ಹೇಳಿರುವ ಕಾರಣ ಈ ಜಗತ್ತಿಗೆ ಬ್ರಹ್ಮವೇ ಉಪಾದಾನಕಾರಣವೂ, ನಿಮಿತ್ತಕಾರಣವೂ ಆಗಿದೆ. ಪರಮಾತ್ಮನ ಸಂಕಲ್ಪದಿಂದ ಸೃಷ್ಟಿಯಾಗಿದೆ ಎಂದು ಸಾರಲಾಗಿದೆ. ಹೀಗೆ, ಈ ಜಗತ್ತಿನ ಉತ್ಪತ್ತಿ ಬ್ರಹ್ಮಾಧೀನವಾಗಿದೆ.

***ಬ್ರಹ್ಮ ಮತ್ತು ಜಗತ್ತು :–**

ಸೃಷ್ಟಿಗೂ ಮೊದಲಿದ್ದ ಪರಮಾತ್ಮನು ತನ್ನ ಸಂಕಲ್ಪಕ್ಕನುಗುಣವಾಗಿ ಅನೇಕ ನಾಮರೂಪಾತ್ಮಕವಾದ ಜಗತ್ತನ್ನು ಸೃಜಿಸಿದನೆನ್ನಲಾಗಿದೆ. ಛಾಂದೋಗ್ಯೋಪನಿಷತ್ತಿನಲ್ಲಿ "ಸರ್ವಂ ಖಲ್ವಿದಂ ಬ್ರಹ್ಮ" ಎನ್ನುತ್ತಾ ಪ್ರಪಂಚದ ಜನ್ಮಾದಿಗಳಿಗೂ ಬ್ರಹ್ಮವೇ ಕಾರಣವೆಂದೂ, ಬ್ರಹ್ಮವು ಹೃದಯಕಮಲದಲ್ಲಿ ಆತ್ಮನಾಗಿರುವುದೆಂದು ಸಾರುತ್ತದೆ. ಈ ಜಗತ್ತೇ ಬ್ರಹ್ಮಮಯ. ಬ್ರಹ್ಮವಸ್ತು ಮತ್ತು ಜಗತ್ತಿಗಿರುವ ನಿರ್ದಿಷ್ಟವಾದ ಸಂಬಂಧವನ್ನು ಹೇಳುವುದು ಅಸಾಧ್ಯವಾದರೂ, ಬ್ರಹ್ಮನೇ ಉಪಾದಾನ ಮತ್ತು ನಿಮಿತ್ತಕಾರಣವೆಂಬುದು ವಿದಿತ. ಒಟ್ಟಿನಲ್ಲಿ ಬ್ರಹ್ಮವಸ್ತುವು ಜಗತ್ತಿನ ಚೇತನಾಚೇತನಪದಾರ್ಥಗಳನ್ನು ಒಂದುಗೂಡಿಸುವ ಸೂತ್ರವೆಂದು ವಿವರಿಸಲಾಗಿದೆ.

***ಜೀವಾತ್ಮ:–**

ಜೀವಾತ್ಮನ ಸ್ವರೂಪವನ್ನು ವಿವರಿಸುತ್ತಾ 'ಸಮಾನಗುಣರಾದ, ಸಖರಾದ ಎರಡು ಪಕ್ಷಿಗಳು ಒಂದು ಮರದಲ್ಲಿದ್ದು, ಒಂದು ಪಕ್ಷಿಯು ಮರದಲ್ಲಿನ ಸ್ವಾದುವಾದ ಪಿಪ್ಪಲಫಲವನ್ನು ತಿನ್ನುತ್ತದೆ, ಮತ್ತೊಂದು ಅದನ್ನು ನೋಡುತ್ತಾ ತಾನು ತಿನ್ನದೇ ಹಾಗೆಯೇ ಪ್ರಕಾಶಿಸುತ್ತದೆ' ಎಂದು ವರ್ಣಿಸಲಾಗಿದೆ. ಅಂದರೆ, ಪ್ರಪಂಚದಲ್ಲಿ ಜೀವನು ದೇವರೊಡನೆ ವಾಸಿಸುತ್ತಿದ್ದು, ಶರೀರವೆಂಬ ವೃಕ್ಷದಲ್ಲಿ ಜೀವನು ಈಶ್ವರನೊಡನೆ ವಾಸಿಸುತ್ತಿದ್ದಾನೆ; ದುಃಖಾಭಿಭೂತನಾಗಿ ಮೋಹಗೊಂಡು ಅಸಹಾಯಕತೆಯಿಂದ ಶೋಕಿಸುತ್ತಿದ್ದಾನೆಂದೂ; "ನ ಜಾಯತೇ ಮ್ರಿಯತೇ ವಾ ವಿಪಶ್ಚಿನ್ನಾಯಮ್. . . . ." (ಕಠೋಪನಿಷತ್– ೧.೩.೧೮) ತನ್ನೊಂದಿಗಿರುವ ಈಶ್ವರನನ್ನು ಪ್ರಭುವಾಗಿ ಕಂಡು ತನಗೆ ಸುಖವನ್ನೀಯುವವನೆಂದು ಅರಿತಾಗ ಜೀವನ ಶೋಕಗಳು ಕಳೆಯುವವು ಮತ್ತು ಈ ಜೀವಾತ್ಮನು ಜನ್ಮರಹಿತನೂ, ಮರಣವಿಲ್ಲದವನೂ, ನಿತ್ಯನೂ ಆಗುವನೆಂದು ವಿವರಿಸಲಾಗಿದೆ. ನಶ್ವರವಾದ ದೇಹವಾದರೂ ಆತ್ಮನು ಮಾತ್ರ ನೈಜಸ್ವರೂಪನು, ಅಮೃತಸ್ವರೂಪನೂ, ಅಶರೀರಿಯೂ, ಕರ್ಮಾನುಗುಣವಾಗಿ ದೇಹಸ್ಥಾನವನ್ನು ಪಡೆಯುವನೆಂದು, ದೇಹತ್ಯಾಗದ ನಂತರ ಪರಂಜ್ಯೋತಿಯನ್ನು ಸೇರಿ ಸಹಜರೂಪನಾಗಿ ಪ್ರಕಾಶಿಸುವನೆಂದು ತಿಳಿಸಲಾಗಿದೆ.

***ಬ್ರಹ್ಮಸಾಕ್ಷಾತ್ಕಾರ ಮತ್ತು ಮೋಕ್ಷ:–**

ಸಾಂಸಾರಿಕವಾದ ಬಂಧನಗಳಿಂದ ಶೋಚನೀಯನಾದ ಜೀವನಿಗೆ

ಬ್ರಹ್ಮಸಾಕ್ಷಾತ್ಕಾರವೇ ಧ್ಯೇಯವೆಂದು, ಅಮೃತತ್ವವನ್ನು ಪಡೆಯುವ ಮೂಲಕ ಜೀವನು ಭಗವಂತನ ಸಾನಿಧ್ಯ ಪಡೆವನೆಂದೂ, ಭಗವಂತನು ಎಲ್ಲರಲ್ಲಿಯೂ ಅಂತರ್ಯಾಮಿಯಾಗಿದ್ದು ಮಾನವನ ಆದ್ಯಕರ್ತವ್ಯದಲ್ಲಿ ಭಾಗಿಯೆಂದೂ, ಪರಮಾತ್ಮನನ್ನು ಆಶ್ರಯಿಸುವುದರ ಮೂಲಕ "ಆನಂದಂ ಬ್ರಹ್ಮಣೋ ವಿದ್ವಾನ್ ನ ಬಿಭೇತಿ ಕದಾಚನೇತಿ" ಎಂದು ತೈತ್ತರೇಯೋಪನಿಷತ್ತು ಸಾರುತ್ತದೆ. ಲೋಕದಲ್ಲಿ ಲಭಿಸುವ ಸುಖಗಳು ಮನಸ್ಸಿಗೂ, ಇಂದ್ರಿಯಗಳಿಗೂ ತಾತ್ಕಾಲಿಕ ಆಪ್ಯಾಯಮಾನತೆಯನ್ನು ನೀಡುತ್ತಿದ್ದು, ಈ ಐಹಿಕ ಸುಖಗಳು ಪ್ರೇಯವೇ ಹೊರತು ಶ್ರೇಯವಲ್ಲವೆಂದು ವಿವರಿಸಲಾಗಿದೆ. ಇಲ್ಲಿ ಜ್ಞಾನೋಪಾಸನೆ ಮುಖೇನ ಆತ್ಮಸಾಕ್ಷಾತ್ಕಾರಕಾಗಿ ಬೇಕಾದ ಅಂತಃಶುದ್ಧಿಯನ್ನು ವಿಧಿಸಲಾಗಿದೆ. ಹೀಗೆ, ಅಮೃತತ್ವದ ಪ್ರಾಪ್ತಿಗೆ ಬೇಕಾದ ಸಕಲವನ್ನೂ ನಿರ್ಮಿಸಿಕೊಟ್ಟಿರುವ ವೈದಿಕಧರ್ಮವು ಜೀವನ ಜೀವನ್ಮುಕ್ತಿಗೆ ಆಪ್ಯಾಪಮಾನವಾಗಿದೆ.

*ಜಿನದೇವರನ್ನಾರಾಧಿಸುವವರು ಜೈನಧರ್ಮಿಯರು. ಇಲ್ಲಿ ಜಿನನಿಂದ ಬೋಧಿತವಾದ ಧರ್ಮವು ಜೈನಧರ್ಮವೆಂಬುದು ಅರ್ಥಯುತವಾದುದು. ತಮ್ಮ ತಮ್ಮ ಕರ್ಮಗಳನ್ನು ಗೆಲ್ಲುವವರು ಜಿನರೆನಿಸುತ್ತಾರೆ. ಜಿನರಾದೊಡನೆಯೇ ಪ್ರತಿಯೊಂದು ಜೀವಿಯೂ ಸರ್ವಜ್ಞನಾಗಿ ವೀತರಾಗಿಯಾಗುವನು. ಈ ಅವಸ್ಥೆಯಲ್ಲಿನ ಧರ್ಮವು ಪ್ರಾಮಾಣಿಕವೂ, ಸಜ್ಜನಸಮಾದೃತವೂ ಆಗಿರುತ್ತದೆ. ಅಜ್ಞಾನದಿಂದ ಹೊರಬಂದು ವಿಷಯಸೌಖ್ಯವನ್ನೂ ದೂರೀಕರಿಸಿ, ಜ್ಞಾನಿಯಾಗುವುದೇ ಪರಮಗತಿ. ಎಲ್ಲಾ ಧರ್ಮದಲ್ಲಿಯೂ ವಿಚಾರಶೀಲತೆಯು ಒಂದು ಮುಖವಾದರೆ; ಮತ್ತೊಂದು ಮುಖವು ಆಚಾರವಾಗಿರುತ್ತದೆ. ಆಚಾರಕ್ಕೆ ಅಹಿಂಸೆಯು ಮೂಲಾವಲಂಬಿಯಾಗಿದ್ದು; ಎಲ್ಲಾ ಜೀವಿಗಳನ್ನು ವಿಪತ್ತಿನಿಂದ ಸಂರಕ್ಷಿಸುವುದು ಜಿನೋಪದಿಷ್ಟ ಮೂಲಮಂತ್ರವಾಗಿದೆ. ಇಲ್ಲಿ ಆತ್ಮನಿಗೆ ಚೈತನ್ಯವು ಧರ್ಮವಾಗುತ್ತದೆ. ವಸ್ತುಸ್ವಭಾವದ ನಿರೂಪಣೆಯು ಅಯಾಧರ್ಮದ ದರ್ಶನವಾಗಿದ್ದು; ಆತ್ಮ, ಪರಲೋಕ, ಪರಮಾತ್ಮಸ್ವರೂಪವೇ ಇಲ್ಲಿನ ವಿವೇಚನೆ. ಆಚಾರರೂಪಿ ಧರ್ಮದ ವಿವರಣೆಯಲ್ಲಿ ಜೀವಾತ್ಮನು ಪರಮಾತ್ಮನಾಗುವ ಮಾರ್ಗವನ್ನು ಕಾಣಬಹುದು. ಹೀಗಾಗಿಯೇ, ದರ್ಶನವು ಧರ್ಮವನ್ನು ನಿರೂಪಿಸುತ್ತದೆ; ಅದಕ್ಕಾಗಿ ಧರ್ಮದ ವಿವೇಚನೆಯಲ್ಲಿ ದರ್ಶನ ಮತ್ತು ಚಾರಿತ್ರಗಳ ಸಮಾಲೋಚನೆ ಸಾಧ್ಯ. ಜೈನಧರ್ಮದಲ್ಲಿರುವಂತೆ ಆತ್ಮ–ಪರಮಾತ್ಮರಲ್ಲಿನ ಅಂತರದ ಅರಿವಾದಾಗಲೇ ಚಾರಿತ್ರವನ್ನವಲಂಬಿಸಿ ಮಾನವನು ಮೋಕ್ಷದ ಸಾಧಕನಾಗುವನು.

ಜಿನಧರ್ಮದ ಆದ್ಯಪ್ರವರ್ತಕ ಭಗವಾನ್ ಋಷಭದೇವ. ಭಾಗವತಾದಿ ಧರ್ಮಗ್ರಂಥಗಳಲ್ಲೂ ಮತಪ್ರತಿಷ್ಠಾಪಕರೆಂದು ಇವರನ್ನು ಕೊಂಡಾಡಲಾಗಿದೆ. ಈತನು ನಾಭಿ ಮತ್ತು ಮರುದೇವಿಯರ ಮಗನಾಗಿದ್ದು; ಜಯಂತಿಯೆಂಬ ಪತ್ನಿಯಿದ್ದು, ನೂರುಮಕ್ಕಳ ತಂದೆಯಾಗಿದ್ದನು. ಜ್ಯೇಷ್ಠಪುತ್ರ ಭರತನಿಗೆ ರಾಜ್ಯವನ್ನೊಪ್ಪಿಸಿ, ದಿಗಂಬರಸನ್ಯಾಸಿಯಾಗಿ ಆತ್ಮಧ್ಯಾನಪರತೆಯೊಡನೆ ಪ್ರಾಣೋತ್ಕ್ರಮಣವನ್ನು ಮಾಡಿದನು.

***ಆತ್ಮಸ್ವರೂಪ : –**

ಜೈನದಾರ್ಶನಿಕರ ಪ್ರಕಾರ ಕರ್ಮವಿಹಿತನಾದ ಶುದ್ಧಾತ್ಮನೇ ಆತ್ಮ: ಕರ್ಮಸಹಿತನೂ ಇಂದ್ರಿಯ ಬಲಿ, ಆಯಸ್ಸು, ಶ್ವಾಸೋಚ್ಛ್ವಾಸಗಳಿಂದ ನಿಪೀಡಿತನಾದವನು ಜೀವನೆನಿಸುತ್ತಾನೆ. ಶುದ್ಧಾತ್ಮನು ಚೈತನ್ಯಲಕ್ಷಣನಾಗಿದ್ದು, ಅಮೂರ್ತ ಮತ್ತು ಶುಭಾಶುಭಕರ್ಮಗಳ ಕರ್ತೃವೂ, ಶಕ್ತಿಸಂಪನ್ನನೂ, ಕರ್ಮಗಳಿಂದ ಮುಕ್ತನಾಗಿ ತನ್ನ ಸ್ವಭಾವಿಕಗುಣದಿಂದ ಮೇಲ್ಮುಖವಾದ ಸಿದ್ಧಶಿಲೆಯನ್ನೇರುವ ಸ್ವಭಾವಸಂಪನ್ನನಾಗಿರುತ್ತಾನೆ. ಆತ್ಮನಿಗೆ ವರ್ಣರಸಗಂಧಗಳಿರದೇ ಅಮೂರ್ತನಾಗಿದ್ದು, ಶುದ್ಧಭಾವ, ಅನಂತಜ್ಞಾನ, ಸುಖಾದಿಗಳಿಗೆ ಕರ್ತೃವಾಗಿರುತ್ತಾನೆ. ಹೀಗೆ, ಆತ್ಮನು ಭಾವಕರ್ಮಗಳ ಆಸ್ರವದಲ್ಲಿ ಸಮರ್ಥನೂ, ಶಕ್ತನೂ; ಭಾವಕರ್ಮಗಳ ಸಂವರದಲ್ಲಿ ಸಮರ್ಥನೂ; ಅವುಗಳ ಕ್ಷಯ ಮತ್ತು ತ್ಯಾಗದಲ್ಲಿಯೂ ಸಮರ್ಥನಾಗಿರುವುದರಿಂದ ಅವನೇ ಪ್ರಭುವೆನಿಸುತ್ತಾನೆ.

***ಮೋಕ್ಷಸ್ವರೂಪ : –**

ಜೀವನು ತನ್ನ ಕರ್ಮಗಳನ್ನು ಕಳೆದುಕೊಂಡ ನಂತರ ಲೋಕಾಂತ್ಯದವರೆಗೂ ಹೋಗಬಲ್ಲನು. ಈ ಊರ್ಧ್ವಗಮನಕ್ಕೆ ಪೂರ್ವಸಂಸ್ಕಾರವೂ, ಆತ್ಮನ ಸ್ವಭಾವವೂ ಕಾರಣವಾಗುತ್ತದೆ. ಇದಕ್ಕೆ ಕರ್ಮಬಂಧನನಾಶವೂ, ಸರ್ವಸಂಗರಾಹಿತ್ಯವೂ ಸಹಾಯಕಗಳು. ಶುದ್ಧಾತ್ಮರಿಗೆ ದರ್ಶನಜ್ಞಾನಗಳಿದ್ದು ಅವರು ಸಿದ್ಧಶಿಲೆಯನ್ನು ತಲುಪಬಲ್ಲರು. ಜೈನದಾರ್ಶನಿಕರ ಪ್ರಕಾರ ಇಡಿಯ ವಿಶ್ವದಲ್ಲಿ ಲೋಕಾಕಾಶ ಮತ್ತು ಅಲೋಕಾಕಶವೆಂಬೆರೆಡು ವಿಭಾಗಗಳಿದ್ದು; ಲೋಕಾಕಾಶದಲ್ಲಿ ಧರ್ಮವೆಂಬ ದ್ರವ್ಯವಿದ್ದು, ಜಗತ್ತಿನಲ್ಲಿ ಹವೆಯಂತಿರುತ್ತದೆ. ಇದಕ್ಕೆ ರೂಪರಸಗಂಧಸ್ಪರ್ಶಗಳಿರದೇ ಆತ್ಮನಿಗೆ ಗೋಚರವಾಗುವಂತಹದ್ದೂ ಆಗಿರುತ್ತದೆ. ಆದರೆ, ಇಂತಹ ದ್ರವ್ಯವು ಅಲೋಕಾಕಾಶದಲ್ಲಿ ಇಲ್ಲದಿರುವುದರಿಂದ ಮುಕ್ತಾತ್ಮರೆಲ್ಲಾ ಸಿದ್ಧಶಿಲೆಯಲ್ಲಿ ಸ್ಥಿರವಾಗಿ ನಿಲ್ಲಬಲ್ಲರೆಂದು ವಿವರಿಸುತ್ತಾರೆ. ಇನ್ನು ಆತ್ಮನು ಅಮೂರ್ತನಾಗಿದ್ದು, ಅವನು ಸಂಬಂಧವು ಕರ್ಮದೊಡನೆ ಅನಾದಿಯಾದುದೆಂದು – "ಅನಾದಿಕರ್ಮಬಂಧ ಸಂತಾನ ಪರತಂತ್ರಸ್ಯಾತ್ಮನಃ ಅಮೂರ್ತಿಂ ಪ್ರತ್ಯನೇಕಾಂತೋ ಬಂಧಪರ್ಯಾಯಂ ಪ್ರತ್ಯೇಕತ್ವಾ ಸ್ಯಾನ್ಮೂರ್ತಂ ತಥಾಪಿ ಜ್ಞಾನಾದಿ ಸ್ವಲಕ್ಷಣಂ ಪರಿತ್ಯಾಗಾತ್ ಸ್ಯಾದಮೂರ್ತಿಃ ।" (ತತ್ವಾರ್ಥರಾಜವಾರ್ತಿಕ) ಎಂಬುದಾಗಿ ವಿವರಿಸಲಾಗಿದೆ.

***ಸೃಷ್ಟಿಕಲ್ಪನೆ :–**

ಲೋಕದ ಸೃಷ್ಟಿಯ ಕರ್ತೃತ್ವವನ್ನು ದೇವರಿಗೆಂದು ಜೈನರು ಸಮ್ಮತಿಸುವುದಿಲ್ಲ. ದೇವರು ಅನಂತಾನಂದಜ್ಞಾನ, ಅನಂತದರ್ಶನ, ಅನಂತಶಕ್ತಿಗಳ ಭಂಡಾರವಾಗಿದ್ದು, ಜನನ–ಮರಣಗಳಿಂದ ವಿಮುಕ್ತನು. ಸಮಸ್ತ ಶಕ್ತಿಸಂಪನ್ನನೂ, ಸಮರ್ಥನೂ, ಕುಶಲಿಯೂ ಆದ ಪರಮೇಶ್ವರನಿಂದ ನಿರ್ಮಿತವಾದ ಜಗತ್ತು ದುಃಖ–ಅಶಾಂತಿಗಳಿಂದ ಕೂಡಿರಲಾರದೆನ್ನಲಾಗಿದೆ. ಪರಮಾತ್ಮನು ವಿಶ್ವವ್ಯಾಪಕನಾಗಿದ್ದು, ಅನಾದಿಕಾಲದಿಂದಲೂ ಜಡ–ಚೇತನಗಳ ಸ್ವಾಭಾವಿಕ ಸಂಯೋಗ–ವಿಯೋಗಗಳಿಂದ ಜಗತ್ತಿನ ಪದಾರ್ಥಗಳಲ್ಲಿ ಸ್ವಯಂ ಸಂಯುಕ್ತ–ವಿಯುಕ್ತವಾಗುವ ಶಕ್ತಿಯುಂಟು. ಪರಮಾತ್ಮನಲ್ಲಿ ಕರ್ತೃತ್ವದ ಆರೋಪವನ್ನು ಮಾಡಿದರೆ ಅವನು ವಂದನೀಯ ವಿಭೂತಿಯಾಗನು; ಮೇಲಾಗಿ ರಾಗ–ದ್ವೇಷ–ಮೋಹಾದಿಗಳ ವಿಕಾರವಶನಾದ ವ್ಯಕ್ತಿ ಎನಿಸಿ, ದಿವ್ಯಾನಂದದಿಂದ ವಂಚಿತನಾಗುವನು; ಇದು ಪವಿತ್ರಾತ್ಮಗಳ ಆದರ್ಶವಾಗದೆಂದು ಸಮರ್ಥಿಸಲಾಗಿದೆ.

ಜೈನಾಗಮಗಳೂ ವೇದಗಳಂತೆಯೇ ಕಿವಿಯಿಂದ ಕಿವಿಗೆ ನೆನಪಿನಿಂದ ನೆನಪಿತೆ ಅನುಸ್ಯೂತವಾಗಿ ಬಂದಿದ್ದು; ತೀರ್ಥಂಕರರು 'ಸಮವಸರಣ'ವೆಂಬ ಧರ್ಮೋಪದೇಶಸಭೆಯಲ್ಲಿ ಸಮಾವಿಷ್ಟರಾಗಿದ್ದ ದೇವ, ಮನುಷ್ಯ, ಪಶು–ಪಕ್ಷಿಗಳೇ ಮೊದಲಾದ ಜೀವಸಮೂಹಕ್ಕೆ ಅರ್ಥವಾಗುವಂತಹ ಉಪದೇಶವನ್ನು ಮಾಡಿದ್ದು, ಗಣಧರರು ತೀರ್ಥಂಕರರ ಉಪದೇಶಗಳನ್ನು ವಿಸ್ತಾರವಾಗಿ ವಿವರಿಸಿ ಹೇಳಿದರು. ಅವರ ನಿರ್ವಾಣದ ನಂತರ ಉಪದೇಶಗಳನ್ನು ಗಣಧರರ ಮೂಲಕ ಅವರ ಶಿಷ್ಯರೆಲ್ಲರೂ ತಿಳಿದರು. ಈ ಸಂಪ್ರದಾಯವೇ ಆದಿತೀರ್ಥಂಕರರಿಂದ ಹಿಡಿದು ಮಹಾವೀರಸ್ವಾಮಿಯವರ ಕಾಲದವರೆಗೂ ನಡೆದುಕೊಂಡುಬಂದಿತು.

***ಶ್ರುತಸ್ಕಂಧ :–**

ತೀರ್ಥಂಕರರಿತ್ತ ಉಪದೇಶಾಮೃತವೇ ಶ್ರುತಸ್ಕಂಧ. ಇದರಲ್ಲಿ ನಾಲ್ಕು ವಿಭಾಗಗಳಿದ್ದು; ಮೊದಲನೇ ಅನುಯೋಗದಲ್ಲಿ ತೀರ್ಥಂಕರ, ಚಕ್ರವರ್ತಿ, ಬಲದೇವ, ವಾಸುದೇವ, ಪ್ರತಿವಾಸುದೇವ ಮತ್ತು ೬೩ ಶಲಾಕಾಪುರುಷರ

ಚರಿತ್ರೆಗಳು ಉಕ್ತವಾಗಿದ್ದು, ಮಹಾಪುರಾಣಾದಿ ಪುರಾಣಗ್ರಂಥಗಳೂ ಒಳಗೊಂಡಿವೆ. ಎರಡನೇಯ ಅನುಯೋಗದಲ್ಲಿ ಸೂರ್ಯಪ್ರಜ್ಞಪ್ತಿ, ಚಂದ್ರಪ್ರಜ್ಞಪ್ತಿ ಮುಂತಾದ ಗ್ರಂಥಗಳಿವೆ. ಮೂರನೆಯ ಚರಣಾನುಯೋಗದಲ್ಲಿ ಜೈನಮುನಿಗಳೂ, ಶ್ರಾವಕರೂ ನಡೆದುಕೊಳ್ಳಬೇಕಾದ ಆಚಾರಶುದ್ಧಿಗಳಿವೆ. ನಾಲ್ಕನೆಯ ದ್ರವ್ಯಾನುಯೋಗದಲ್ಲಿ ತತ್ವಾರ್ಥಸೂತ್ರ, ಗೊಮ್ಮಟಸಾರಾದಿ ವಿಷಯಗಳಿವೆ.

***ಜೀವ ಮತ್ತು ಅಜೀವ :-**

ದೇವ, ಮನುಷ್ಯ, ಪಶು-ಪಕ್ಷಿ, ಗಿಡ-ಮರಗಳಲ್ಲೆಲ್ಲಾ ಚೈತನ್ಯಸ್ವರೂಪನಾಗಿರುವ ಜೀವನಿದ್ದಾನೆ. ಜೀವನು ಪರಿಶುದ್ಧ ಮತ್ತು ನಾಶರಹಿತ. ಜೀವಗಳು ಅಸಂಖ್ಯಾತವಾಗಿದ್ದು, ಇವುಗಳಲ್ಲಿ ಮುಕ್ತಜೀವ, ಸಂಸಾರಿಜೀವವೆಂದು ಎರಡು ವಿಧ. ಇಲ್ಲಿ ಸಿದ್ಧರೂ, ಕೇವಲಿಗಳೂ ಮುಕ್ತರಾಗಿದ್ದು, ಅನಂತಜ್ಞಾನ, ದರ್ಶನ ಮತ್ತು ಸುಖಗಳಿವೆ. ಆದರೆ, ಅಜೀವದೊಡನೆ ಬೆರೆತು ಬದ್ಧನಾಗಿ ಅನಂತಜ್ಞಾನಾದಿಗಳಿಂದ ದೂರವಾದುದು ಸಂಸಾರಿಜೀವಿ. ಸಂಸಾರಿಯಾದ ಜೀವಿ ಒಳ್ಳೆಯ ಕರ್ಮ ಮಾಡಿ ದೇವತೆಯಾಗಬಲ್ಲುದು ಮತ್ತು ಕೆಟ್ಟ ಕರ್ಮ ಮಾಡಿ ತಿರ್ಯಕ್ಜಂತುವಾಗಬಹುದು. ಎಡಬಿಡದೆ ಅಲೆದಾಡುವ ಜೀವವು ದೇವ, ಮನುಷ್ಯ, ತಿರ್ಯಕ್, ನಾರಕ ಎಂಬ ನಾಲ್ಕು ನೆಲೆಗಳೆಂಬ ಚತುರ್ಗತಿಯನ್ನು ಹೊಂದುತ್ತದೆ. ಚೇತನವಲ್ಲದ್ದು ಅಜೀವವೆನಿಸುತ್ತದೆ.

***ಪುಣ್ಯ-ಪಾಪ ಮತ್ತು ಕರ್ಮ :-**

ಜೀವದ ಶುಭಪರಿಣಾಮವೇ ಪುಣ್ಯ ಮತ್ತು ಅಶುಭಪರಿಣಾಮವೇ ಪಾಪ. ಜೀವದ ಒಳ್ಳೆಯ ಮತ್ತು ಕೆಟ್ಟ ಭಾವಗಳಿಗೆ ತಕ್ಕಂತೆ ಪುಣ್ಯ-ಪಾಪಗಳ ಕಡೆಗೆ ಪ್ರವಹಿಸುತ್ತದೆ. ಇದನ್ನೇ ಪುಣ್ಯಾಸ್ರವ ಮತ್ತು ಪಾಪಾಸ್ರವ ಎನ್ನಲಾಗಿದೆ. ಇನ್ನು ಚೇತನವು ಅಚೇತನದೊಡನೆ ಕಲೆತಾಗ ಪ್ರಾರಂಭವಾಗುವ ಕಾರ್ಯವೇ ಕರ್ಮ. ಅದೇ ಪುದ್ಗಲ. ಜೀವನನ್ನು ಸಂಸಾರದಲ್ಲಿ ಕಟ್ಟಿಹಾಕಿರುವುದು ಕರ್ಮವಾದ್ದರಿಂದ, ಈ ಕರ್ಮಬಂಧನವನ್ನು ಕತ್ತರಿಸಿ ಹಾಕಿದರೆ ಜೀವನಿಗೆ ಮೋಕ್ಷವು ದೊರೆಯುತ್ತದೆ.

ಇದರಂತೆ, ಜೀವನ ಪಾಪ-ಪುಣ್ಯಗಳಿಗನುಗುಣವಾಗಿ ಅಂಟಿಕೊಳ್ಳುವ ಒಂದು ಬಗೆಯ ಬಣ್ಣವೇ ಲೇಶ್ಯೆ. ಇದರಿಂದ ಮಾನವನ ಭಾವನೆ ಮತ್ತು ಕ್ರಿಯೆಗಳಲ್ಲೂ ಅಪಾರ ವ್ಯತ್ಯಾಸವಾಗುತ್ತದೆ. ಇನ್ನು ಸಾಧಕನು ಸಿದ್ಧನಾಗಲು, ಮುಕ್ತನಾಗಲು ತನ್ನ ಆತ್ಮನನ್ನು ಉಜ್ವಲಗೊಳಿಸಿಕೊಳ್ಳಲುಬೇಕಾದ ತತ್ವಜ್ಞಾನದ ಸೂತ್ರವನ್ನೇ "ಸಮ್ಯಗ್ದರ್ಶನಜ್ಞಾನಚಾರಿತ್ರಾಣಿ ಮೋಕ್ಷಮಾರ್ಗಃ" ಎಂದು ಸಮರ್ಥಿಸಲಾಗಿದೆ.

***ವೈದಿಕಪುರಾಣ ಮತ್ತು ಜೈನಪುರಾಣಗಳ ಲೌಕಿಕಾಲೌಕಿಕ ಇತಿವೃತ್ತ :-**

ವೇದವಾಙ್ಮಯವು ಬಹಳ ವ್ಯಾಪಕವೂ, ಮಹತ್ವಪೂರ್ಣವೂ ಆಗಿದ್ದು, ಇದರ ಶಾಖೋಪಶಾಖೆಗಳ ಅಧ್ಯಯನ ಅತ್ಯಂತ ಸ್ಥೂಲವಾದುದು. ಗೌಣಾರ್ಥದಲ್ಲಿ ವೇದವೆಂಬುದು ಜ್ಞಾನಪ್ರತಿಪಾದಕವಾದ ಗ್ರಂಥವೆಂದಾಗುತ್ತದೆ. ಮಾಧವಾಚಾರ್ಯರು ತಮ್ಮ 'ವೇದಾರ್ಥಪ್ರಕಾಶ'ದಲ್ಲಿ – "ಇಷ್ಟಪ್ರಾಪ್ತ್ಯನಿಷ್ಟಪರಿಹಾರಯೋಃ ಅಲೌಕಿಕಮುಪಾಯಮ್ ಯೋ ಗ್ರಂಥಃ ವೇದಯತಿ ಸ ವೇದಃ । ಅಲೌಕಿಕಪದೇನ ಪ್ರತ್ಯಕ್ಷಾನುಮಾನೇ ವ್ಯಾವರ್ತ್ಯೇತೇ ।" ಎಂದು ವಿವರಿಸಿದ್ದಾರೆ. ಸಂಸಾರವೆಂಬ ಜನನ-ಮರಣಗಳ ಚಕ್ರಪರಿವರ್ತನೆಯ ಅನಿಶ್ಚಿತತೆಯನ್ನು ಪರಿಹರಿಸಿ, ಪರಬ್ರಹ್ಮಪ್ರಾಪ್ತಿಯನ್ನುಂಟು ಮಾಡುವ ಅನನ್ಯ ವಿಧಾನವೇ ವೇದಗಳು. ಇದೊಂದು ಬ್ರಹ್ಮಪ್ರತಿಪಾದಕವಾದ ಶಬ್ದ. ಋಷಿಗಳು ತಮ್ಮ ತಮ್ಮ ತಪಶ್ಯಕ್ತಿಯಿಂದ ಸಾಕ್ಷಾತ್ಕರಿಸಿಕೊಂಡಿರುವುದೇ ವೇದಗಳು. ಹಾಗಾಗಿಯೇ ಅವರು ಮಂತ್ರದ್ರಷ್ಟಾರರಾದರು. ಸಾಕ್ಷಾತ್ಕೃತ ಋಷಿಗಳಿಂದ ಶಿಷ್ಯೋಪಾಧ್ಯಾಯಿಕವಾಗಿ ತಿಳಿದುಕೊಂಡವರು 'ಶ್ರುತರ್ಷಿ'ಗಳಾದರು. ಮುಂದಿನ ಜನಾಂಗದದಲ್ಲಿ ಅನುಸ್ಯೂತವಾಗಿ ಮುಂದುವರೆಯಲೆಂದು ವಾಗ್ವ್ಯವಹಾರಕ್ಕನುಗುಣವಾಗಿ ವಿಭಜಿಸಿ ನೀಡಲಾಯಿತು.

ವೈದಿಕಸಾಹಿತ್ಯವನ್ನನುಸರಿಸಿ ಬಂದ ಲೌಕಿಕಸಾಹಿತ್ಯವು ವಿಷಯ, ಭಾಷೆ, ಭಾವಾದಿಗಳ ದೃಷ್ಟಿಯಿಂದ ಮಹತ್ವಪೂರ್ಣವೂ; ಪುನಃ ವೈದಿಕಸಾಹಿತ್ಯಕ್ಕಿಂತ ಆಕೃತಿ, ಭಾಷೆ, ವಿಷಯ ಮತ್ತು ಅಂತಃಸತ್ವದಲ್ಲಿ ಭಿನ್ನತೆಯನ್ನೂ ಹೊಂದಿರುತ್ತದೆ. ವೈದಿಕಸಾಹಿತ್ಯವು ಧರ್ಮಪ್ರಧಾನ ಸಾಹಿತ್ಯವಾಗಿದ್ದು, ದೇವತೆಗಳಿಗೆ ಸಂಬಂಧಿಸಿದ ಯಜ್ಞ-ಯಾಗಾದಿ ವಿಧಿ-ವಿಧಾನಗಳನ್ನು ಸ್ತೋತ್ರಮುಖೇನ ವಿಶಿಷ್ಟವಾಗಿ ವಿವರಿಸುತ್ತದೆ. ಆದರೆ, ಲೌಕಿಕಸಾಹಿತ್ಯದಲ್ಲಿ ಲೋಕವೃತ್ತವೇ ಪ್ರಧಾನವಾಗಿದ್ದು, ಚತುರ್ವಿಧಪುರುಷಾರ್ಥಗಳ ವಿಶೇಷಪ್ರವೃತ್ತಿಯನ್ನು ವರ್ಣಿಸಲಾಗಿದೆ. ವೇದೋಪನಿಷತ್ತುಗಳಿಂದ ಇಲ್ಲಿಯೂ ನೈತಿಕತೆಯು ತುಂಬಿದ್ದು, ಧರ್ಮಾವಲಂಬನೆಯ ಉತ್ಕೃಷ್ಟತೆಯನ್ನು ಸಾರಲಾಗಿದೆ. ದೇವತೋಪಾಸನೆಗೂ ಇಲ್ಲಿ ಪ್ರಧಾನ ಆದ್ಯತೆಯಿದ್ದು, ಲೌಕಿಕ ವ್ಯವಹಾರಗಳ ಸಹಜ ಸಾಹಚರ್ಯವನ್ನು ಬೋಧಿಸಲಾಗಿದೆ. ಆದರೆ ವೈದಿಕದಲ್ಲಿನ ಪ್ರಸಾರ, ಪ್ರಸಾದ, ಸೌಂದರ್ಯಗಳು ಲೌಕಿಕದಲ್ಲಿ ಗೌಣವಾಗಿದ್ದು; ವ್ಯಾಕರಣ ಮತ್ತು ದರ್ಶನಶಾಸ್ತ್ರಗಳಿಗೆ ಮಹತ್ವ ನೀಡಲಾಗಿದೆ. ವೈದಿಕ ಛಂದಿಸ್ಸಿಗಿಂತಲೂ ಭಿನ್ನವಾದ ಛಂದಸ್ಸಿನ ಪ್ರಯೋಗವಿದ್ದು, ಲಘು-ಗುರುಗಳಿಗೆ ಮಹತ್ವವುಂಟು. ಭಾಷಾದೃಷ್ಟಿಯಿಂದಲೂ ಭಿನ್ನವಾಗಿರುವ ಲೌಕಿಕಸಾಹಿತ್ಯದಲ್ಲಿ ನಿಯಾಮಕ ಮತ್ತು ಸಂಸ್ಕರಿಸಲ್ಪಟ್ಟ ಪಾಣಿನಿಮಹರ್ಷಿಯ 'ಅಷ್ಟಾಧ್ಯಾಯೀ' ಗ್ರಂಥವು ಹೆಚ್ಚು ವ್ಯಾಕರಣಶುದ್ಧತೆಯನ್ನು ನಿಯಮಿಸಿಕೊಟ್ಟಿದೆ. ಹೀಗಿದ್ದರೂ, ರಾಮಾಯಣ, ಮಹಾಭಾರತ, ಪುರಾಣಗಳಲ್ಲೂ ಅಪಾಣೀಯಪ್ರಯೋಗಗಳು ಗೋಚರಿಸುತ್ತವೆ. ವೈದಿಕಸಾಹಿತ್ಯದಲ್ಲಿ ರೂಪಕಗಳ ಉಪಯೋಗ ಪ್ರಧಾನವಾಗಿದ್ದು, ಅಮೂರ್ತಭಾವನೆಗಳ ಮೂರ್ತಕಲ್ಪನೆಯು ಪ್ರಸ್ತುತವೆನಿಸಿದೆ. ಲೌಕಿಕಸಾಹಿತ್ಯದಲ್ಲಿ ಅತಿಶಯೋಕ್ತಿಗೆ ವಿಶೇಷಾಭಿರುಚಿಯುಂಟು. ಇನ್ನು ಪುನರ್ಜನ್ಮದ ಸಿದ್ಧಾಂತವು ವೈದಿಕಯುಗದಿಂದ ವಿಕಸಿತವಾಗಿ ಲೌಕಿಕದಲ್ಲಿ ಅತ್ಯಂತ ಆದರಣೀಯವಾಗಿ ಅಂಗೀಕರಿಸಲ್ಪಟ್ಟಿದೆ. ಸಾಹಿತ್ಯದೊಡನೆ ಮಾನವಜೀವನ ಮತ್ತು ಸಮಾಜ ಪ್ರತಿಬಿಂಬಿತವಾಗಿದೆ. ವರ್ಣನೆಯ ಚಾರುತ್ವಕ್ಕೆ ಅಲಂಕಾರಪ್ರಯೋಗ ಹೆಚ್ಚು ಆಕರ್ಷಣೆ ನೀಡಿದೆ.

ಜಿನಧರ್ಮದೀಪಕರಾದ ಮಹಾಪುರುಷರ ದಿವ್ಯವಾದ ಜೀವನಚರಿತ್ರೆಯನ್ನು, ಮತ್ತವರ ಲೋಕೋದ್ಧಾರಕವಾದ ದಿವ್ಯೋಪದೇಶಗಳನ್ನು ಪ್ರಧಾನವಾಗಿ ಹೊಂದಿರುವ, ವಿಶಿಷ್ಟ ಲಕ್ಷಣಗಳಿಂದ ಬದ್ಧವಾದ ಕೃತಿವಿಶೇಷಗಳೇ ಜೈನಪುರಾಣಗಳು. ಜನಸಾಮಾನ್ಯರಲ್ಲಿರಬೇಕಾದ ಧರ್ಮನಿಷ್ಠೆ, ಶ್ರದ್ಧೆ, ನೀತಿಪಾಲನೆ ಮತ್ತು ಸದಾಚಾರ-ವಿಚಾರಗಳು ಜನಜೀವನದಲ್ಲಿ ಭದ್ರವಾಗಿ ಬೇರೂರುವಂತೆ ಪ್ರಭಾವಯುತವಾದವುಗಳೇ ಜೈನಪುರಾಣ ಕೃತಿಗಳೆಂಬುದು ಜೈನಮುನಿಗಳ ವಿವಕ್ಷೆಯಲ್ಲಿ ಸುಲಭ ಮತ್ತು ಸೂಕ್ತವಾದ ಸಾಧನವೆಂಬುದು ಸ್ಪಷ್ಟವಾಗುತ್ತದೆ. ಜೈನಮುನಿಗಳ ಮತ್ತು ಜೈನವಿದ್ವಾಂಸರು ಪುರಾಣಗಳನ್ನು ರಚಿಸುವಾಗ ಒಂದು ಮಾದರಿಯಾಗಿ ವೈದಿಕಪುರಾಣಗಳನ್ನು ಆಧಾರವಾಗಿ ಪರಿಗಣಿಸಿರುವುದು ವಿದಿತ. ಇಲ್ಲಿ ತಮ್ಮ ತಮ್ಮ ಧರ್ಮಸೂಕ್ಷ್ಮಗಳನ್ನು ಸ್ಪಷ್ಟಪಡಿಸಲು, ಪ್ರಚಾರಕ್ಕೆ ವಿಹಿತವಾದ ರೀತಿಯಲ್ಲಿ ಪುರಾಣಗಳ ರಚನೆಯಾದುದು ತಿಳಿದುಬರುತ್ತದೆ. ಸಾಮಾನ್ಯವಾಗಿ ದಶಲಕ್ಷಣಗಳನ್ನು ಮಹಾಪುರಾಣಗಳೂ; ಪಂಚಲಕ್ಷಣಗಳನ್ನು ಉಪಪುರಾಣಗಳು ಹೊಂದಿರಬೇಕೆಂಬ ಲಕ್ಷಣನಿಯಮಗಳಿದ್ದರೂ, ಪಂಚಲಕ್ಷಣಗಳೇ ವೈದಿಕಪುರಾಣಗಳ ನೇರ ಆಶಯವಾಯಿತು. ಹೀಗಾಗಿ, ಜೈನರೂ ಕೂಡ ಪುರಾಣಕ್ಕೆ 'ಪಂಚಲಕ್ಷಣ'ಗಳನ್ನು ಸೇರಿಸಿ, ಧರ್ಮಸಮನ್ವಿತವಾದ ಕೃತಿ ರಚನೆಯಲ್ಲಿ ಉದ್ಯುಕ್ತರಾದರು. ಆದರೆ, ಜೈನಧರ್ಮದ ಮೂಲತತ್ತ್ವಗಳು

ವೈದಿಕಧರ್ಮದ ಮೂಲತತ್ತ್ವಗಳಿಗಿಂತಲೂ ತೀರ ಭಿನ್ನವಾಗಿದ್ದವು. ಆದ್ದರಿಂದ ವೈದಿಕ ಪಂಚಲಕ್ಷಣಗಳನ್ನು ನೇರವಾಗಿ ತಮ್ಮ ರಚನೆಯ ಆಶಯವಾಗಿ ಸ್ವೀಕರಿಸದೇ, ಈ ಸಮಸ್ತ ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳನ್ನು ಮತ್ತು ಅವುಗಳನ್ನು ನಿಯಂತ್ರಿಸುವ ಸರ್ವಜ್ಞನೂ, ಸರ್ವಶಕ್ತನೂ, ಸರ್ವವ್ಯಾಪಿಯೂ ಆದ ಪರಮಾತ್ಮನ ಅಸ್ತಿತ್ವವನ್ನೂ; ಅವನು ದುಷ್ಟಶಿಕ್ಷಕನಾಗಿಯೂ ಮತ್ತು ಶಿಷ್ಟರಕ್ಷಕನಾಗಿಯೂ ಅವತರಿಸಿ ಬಂದ ವಿವಿಧ ಅವತಾರಗಳನ್ನೂ ನಂಬಿರುವ ವೈದಿಕಪುರಾಣ ರಚನಾಕಾರರು ತಮ್ಮ ತಮ್ಮ ಕೃತಿಗಳಿಗೆ ಸ್ಥೂಲವಾಗಿ ಸರ್ಗ-ಪ್ರತಿಸರ್ಗ-ವಂಶ-ಮನ್ವಂತರ-ವಂಶಾನುಚರಿತಗಳೆಂಬ ಪಂಚಲಕ್ಷಣಗಳನ್ನು ನಿಯಮಿಸಿಕೊಂಡಿದ್ದರು. ಭಾಗವತ ಮಹಾಪುರಾಣಾನುಸಾರ-

"ಸರ್ಗೋಸ್ಯಾಥ ವಿಸರ್ಗಶ್ಚ ವೃತ್ತೀ ರಕ್ಷಾಂತರಾಣಿ ಚ ।
ವಂಶೋ ವಂಶಾನುಚರಿತಂ ಸಂಸ್ಥಾ ಹೇತುರಪಾಶ್ರಯಃ॥"
"ದಶಭಿರ್ಲಕ್ಷಣೈರ್ಯುಕ್ತಂ ಪುರಾಣಂ ತದ್ವಿದೋ ವಿದುಃ ।
ಕೇಚಿತ್ ಪಂಚವಿಧಂ ಬ್ರಹ್ಮನ್ ಮಹದಲ್ಪ ವ್ಯವಸ್ಥಯಾ ॥" ಎಂದು ವಿವರಿಸಲಾಗಿದೆ.

ಆದರೆ, ಜೈನಧರ್ಮಕ್ಕೆ ಈ ಹಿನ್ನೆಲೆಯ ಬದಲು ಅವರು ಪ್ರಪಂಚಕ್ಕೆ ಸ್ಥಿತಿಯೊಂದಲ್ಲದೆ ಸೃಷ್ಟಿ-ಲಯಗಳಿಲ್ಲವೆಂದೂ, ತಿರ್ಯಕ್-ನಾರ-ಮಾನವ-ದೇವವೆಂಬ ನಾಲ್ಕು ವಿಧದ ಚತುರ್ಗತಿಯಲ್ಲಿ ಹುಟ್ಟಿ ಬಂದ ಜೀವನೇ ಪುಣ್ಯಪರಿಪಾಕದಿಂದ ಅರ್ಹಂತ ಪದವಿಗೇರಿ ದೇವನಾಗುತ್ತಾನೆಂದೂ ವಿವರಿಸಲಾಗಿದೆ. ಜೊತೆಗೆ ಪ್ರತ್ಯೇಕ ದೈವವಿಲ್ಲವೆಂದು ಹೇಳುವ ಜೈನಧರ್ಮಾವಲಂಬಿಗಳಾದ ಮುನಿಗಳು ಆಯಾ ಜೀವವಿಕಾಸಕ್ರಮದಲ್ಲಿ ಬಂದ ತೀರ್ಥಂಕರರ ಚರಿತ್ರೆಯನ್ನು ಧರ್ಮಪ್ರಚಾರದ ಸಾಧನವನ್ನಾಗಿ ಉಪಯೋಗಿಸಿಕೊಂಡು ಪುರಾಣ ರಚನೆ ಮಾಡಿದರು. ಈ ಮೂಲಕ ತಮ್ಮದೇ ಆದ ಪಂಚಪುರಾಣ ಲಕ್ಷಣಗಳನ್ನೂ ರಚಿಸಿಕೊಂಡರು. ಅವುಗಳೇ-

೧. ಲೋಕಕಾರ ಕಥನ
೨. ತೀರ್ಥಮಹಿಮಾ ಸಮರ್ಥನ
೩. ಚತುರ್ಗತಿ ಸ್ವರೂಪನಿರೂಪಣ
೪. ತಪೋದಾನ ವಿಧಾನ ವರ್ಣನ
೫. ತತ್ಫಲಪ್ರಾಪ್ತಿ ಪ್ರಕಟಣ

ಜೈನರ ಪುರಾಣಪುರುಷರೆಂದರೆ ತ್ರಿಷಷ್ಠಿಶಲಾಕಾಪುರುಷರು. ಜೈನರ ಮಹಾಪುರಾಣಗಳಲ್ಲಿ ಇವರೆಲ್ಲರ ಜೀವನಕಥೆಗಳು ಅವಿಚ್ಛಿನ್ನವಾಗಿ ಬರುತ್ತವೆ. ಇಲ್ಲಿ ತೀರ್ಥಂಕರರಿಗೆ ಆದ್ಯ ಸ್ಥಾನಮಾನ; ಚಕ್ರವರ್ತಿಗಳಿಗೆ ನಂತರದ ಆದ್ಯತೆ. ಅರವತ್ತಮೂರು ಪುರಾಣಪುರುಷರೆಂದರೆ ೨೪ ಮಂದಿ ತೀರ್ಥಂಕರರು, ೧೨ ಮಂದಿ ಷಟ್ಖಂಡ ಚಕ್ರವರ್ತಿಗಳು, ಒಂಬತ್ತು ಮಂದಿಯಂತೆ ಮೂರು ಗುಂಪುಗಳಲ್ಲಿ ಸೇರುವ ಒಂಬತ್ತು ಮಂದಿ ಬಲದೇವರು- ಒಂಬತ್ತು ಮಂದಿ ವಾಸುದೇವರು- ಒಂಬತ್ತು ಮಂದಿ ಪ್ರತಿವಾಸುದೇವರು. ಹೀಗೆ, ಒಟ್ಟು ಅರವತ್ತಮೂರು ಮಂದಿ ಪ್ರಮುಖರು. ಈ ತೀರ್ಥಂಕರರ ಚರಿತ್ರೆಯನ್ನು ವಿವರಿಸುವುದು ಜೈನಪುರಾಣಗಳ ಪ್ರಧಾನವಸ್ತು. ಸಂಸಾರದ ಬವಣೆಯಲ್ಲಿ ಸಿಲುಕಿ ಒದ್ದಾಡುತ್ತಿರುವ ಜೀವವು ಸಮ್ಯಕ್ ಜ್ಞಾನ, ಸಮ್ಯಕ್ ದರ್ಶನ, ಸಮ್ಯಕ್ ಚಾರಿತ್ರ್ಯಗಳೆಂಬ ರತ್ನತ್ರಯವನ್ನಾಶ್ರಯಿಸಿ ಈ ಸಂಸಾರಸಾಗರವನ್ನು ದಾಟಿ ಮುಕ್ತಿಯನ್ನು ಪಡೆಯುವುದು ತೀರ್ಥಂಕರರ ಜೀವನ ಚರಿತ್ರೆಗಳನ್ನು ಹೇಳುವಾಗ ಕವಿಗಳು ವರ್ಣಿಸುವ ಜೀವನವಿಕಾಸಕ್ರಮವಾಗಿದೆ. ಅದನ್ನು ದಾಟುವುದರ ಮೂಲಕ ಶಾಶ್ವತವಾದ ಮೋಕ್ಷಪ್ರಾಪ್ತಿ ಸಾಧ್ಯವಾಗುವುದೇ ಮೂಲೋದ್ದೇಶ. ಇಲ್ಲಿ ತೀರ್ಥಂಕರರ ಚರಿತ್ರೆಯು ಎರಡು ಭಾಗಗಳಿಂದ ಕೂಡಿವೆ. ಮೊದಲನೇ ಭಾಗದಲ್ಲಿ ತೀರ್ಥಂಕರನಾಗುವವರೆಗಿನ ಸಾಧನೆಯ ಕಥೆ; ಮತ್ತೊಂದು ಭಾಗದಲ್ಲಿ ಭವ್ಯಜೀವನ ನಡೆಸಿ ನಿತ್ಯತ್ವವನ್ನು ಹೊಂದುವವರೆಗಿನ ಕಥೆ. ಮೊದಲನೆಯ ಭಾಗದಲ್ಲಿ ತೀರ್ಥಂಕರನಾಗುವ ಜೀವವು ಹೇಗೆ ಹಿಂದಿನ ಜನ್ಮಗಳಲ್ಲಿ ಅನುಭವಿಸಿದ ಕಷ್ಟ-ಸುಖಗಳು ಮತ್ತು ಜೀವದ ಪಾಪವನ್ನು ಕಡಿಮೆ ಮಾಡಿಕೊಂಡು ಮುಂದೆ ಬರುವುದನ್ನು ನಿರೂಪಿಸುವ 'ಭವಾವಳಿ' (ತೀರ್ಥಂಕರರ ಹಿಂದಿನ ಜನ್ಮಗಳ ವರ್ಣನೆ). ಇಲ್ಲಿ ಪ್ರತಿಯೊಂದು ಜನ್ಮದಲ್ಲೂ ತಮ್ಮ ತಮ್ಮ ಕರ್ಮಗಳನ್ನು ಕಡಿಮೆ ಮಾಡಿಕೊಳ್ಳುತ್ತಾ ಮೋಕ್ಷಕ್ಕೆ ಹತ್ತಿರವಾಗುವುದು ಮತ್ತು ತೀರ್ಥಂಕರರ ಜನ್ಮವನ್ನು ಪಡೆಯುವುದು. ಇಂತಹ ಭವಾವಳಿ ಕೆಲವು ಕಡೆ ಚಿಕ್ಕದೂ, ಕೆಲವು ಕಡೆ ದೊಡ್ಡದೂ ಆಗಿರುತ್ತದೆ. ಜೈನಪುರಾಣಗಳ ಅತ್ಯಂತ ಸಾರವತ್ತಾದ ಭಾಗವಿದು. ಎರಡನೆಯದು 'ಪಂಚಕಲ್ಯಾಣ'. ಇಲ್ಲಿ ತೀರ್ಥಂಕರರ ಜೀವನವು ಐದು ಹಂತಗಳಲ್ಲಿ ವರ್ಣಿತವಾಗಿದೆ. ಅವುಗಳೇ, - 'ಗರ್ಭಾವತರಣಕಲ್ಯಾಣ'- ತೀರ್ಥಂಕರರು ಶಿಶುವಾಗಿ ತಾಯಿಯ ಗರ್ಭವನ್ನು ಪ್ರವೇಶಿಸುವುದು; 'ಜನ್ಮಾಭಿಷೇಕಕಲ್ಯಾಣ' - ಅವರ ಹುಟ್ಟು; 'ಪರಿನಿಷ್ಕ್ರಮಣಕಲ್ಯಾಣ'- ವೈರಾಗ್ಯ ಉಂಟಾಗುವುದು; 'ಕೇವಲಜ್ಞಾನಕಲ್ಯಾಣ'-ಅತ್ಯಂತ ಶ್ರೇಷ್ಠಜ್ಞಾನವುಂಟಾಗುವುದು ಮತ್ತು 'ಪರಿನಿರ್ವಾಣಕಲ್ಯಾಣ'- ಮೋಕ್ಷಕ್ಕೆ ಸೇರುವುದು. ಇಲ್ಲಿ ತೀರ್ಥಂಕರರ ಚರಿತೆಯನ್ನು ಹೇಳುವಾಗ ಚಕ್ರವರ್ತಿಯೊಬ್ಬನ ಚರಿತೆಯನ್ನು ಹೇಳುವುದೂ ವಾಡಿಕೆ. ಸಾಮಾನ್ಯವಾಗಿ ಚಕ್ರರತ್ನವನ್ನು ಪಡೆದು ಚಕ್ರವರ್ತಿಯು ಸಮಸ್ತ ಭೂಮಂಡಲವನ್ನೆಲ್ಲಾ ಗೆದ್ದು ಅಪಾರ ಸಂಪತ್ತು, ಕನ್ಯಾರತ್ನಗಳನ್ನೂ ಕಾಣಿಕೆಯಾಗಿ ಪಡೆದು ತನ್ನ ರಾಜಧಾನಿಗೆ ಹಿಂತಿರುಗಿ ಚಕ್ರರತ್ನವನ್ನು ಪೂಜಿಸಿ ಜಿನಮಹಿಮೆಯನ್ನು ಕೊಂಡಾಡಿ ದೇವತೆಗಳೆಲ್ಲಾ ಸೇರಿ ಚಕ್ರವರ್ತಿಗೆ ಪಟ್ಟಾಭಿಷೇಕವನ್ನು ಮಾಡಿ ವೈಭವದಿಂದ ರಾಜ್ಯವಾಳಲು ಆಶೀರ್ವದಿಸುತ್ತಾರೆ. ಇದು ಜೈನಪುರಾಣಗಳಲ್ಲಿನ ಸ್ಥೂಲವಾದ ಕಥಾಹಂದರ. ಇಷ್ಟೇ ಆದರೆ ನಿರ್ದಿಷ್ಟ ಚೌಕಟ್ಟಿನಲ್ಲಿ ಕಾವ್ಯರಚನೆ ಮಾಡಬೇಕಾಗಿದ್ದು, ಕವಿಗೆ ಹೆಚ್ಚಿನ ಸ್ವಾತಂತ್ರ್ಯವಿರುವುದಿಲ್ಲ. ಆದರೆ, ಪ್ರತಿಭಾಶಾಲಿಗಳಾದ ಕವಿಗಳು ಈ ಚೌಕಟ್ಟಿನಲ್ಲೇ ಕಾವ್ಯರಚನೆ ಮಾಡುತ್ತಾ, ಸಂದರ್ಭಾನುಸಾರ ಸಮಯೋಚಿತ ಸನ್ನಿವೇಶಗಳನ್ನು ಮನೋಜ್ಞವಾಗಿ ನಿರ್ಮಿಸುತ್ತಾರೆ. ಅಂತಹವರಲ್ಲಿ ಆದಿಕವಿ ಪಂಪ ಅತ್ಯಂತ ಶ್ರೇಷ್ಠನೆನಿಸಿದ್ದಾನೆ.

ಧರ್ಮದ ದೃಷ್ಟಿಯಿಂದಲೂ, ಭಗವದ್ಭಕ್ತಿಯಿಂದಲೂ ಭರಿತವಾದ ಅತ್ಯಂತ ಶ್ರೇಷ್ಠಕಾವ್ಯವೆಂದರೆ 'ಆದಿಪುರಾಣ'. ಇಲ್ಲಿ ಜೈನಧರ್ಮದ ಸಾರವು ಕನ್ನಡ ಕಾವ್ಯರೂಪದಿಂದ ಮೂರ್ತಿಮತ್ತಾಗಿ ಗೋಚರವಾಗುತ್ತದೆ. ಮಹಾಮಹಿಮನಾದ ಆದಿಜಿನಸ್ವಾಮಿಯ ಶ್ರೇಷ್ಠಮಯ, ಆದರ್ಶಮಯ ಮತ್ತು ತ್ಯಾಗಮಯವಾದ ದಿವ್ಯಕಥೆಯು ಇಲ್ಲಿಯ ಕಥಾವಸ್ತುವಿಶೇಷ. ಸಮ್ಯಕ್ ಜ್ಞಾನ, ಸಮ್ಯಕ್ ಚಾರಿತ್ರ ಮತ್ತು ಸಮ್ಯಕ್ ದರ್ಶನಗಳಿಂದ ಸಮಾಕೃಷ್ಟನಾಗಿ ಶುಚಿಜೀವನವನ್ನು ಕಲ್ಪಿಸಿಕೊಂಡ ಮಹಾಕವಿಯು ತನ್ನ ನೆಚ್ಚಿನ ಧರ್ಮಪ್ರಚಾರ ಮತ್ತು ಪ್ರಸಾರವನ್ನು ಕಾವ್ಯಮುಖೇನ ಕೈಗೊಂಡು ಸಾರ್ಥಕತೆಯನ್ನು ಪಡೆದಿದ್ದಾನೆ. ಈ ಮೂಲಕ ಜಿನಧರ್ಮವನ್ನೂ, ಕಾವ್ಯಧರ್ಮವನ್ನೂ ಮೇಳವಿಸಿ ಒಂದು ವಿಶಿಷ್ಟ ಪರಂಪರೆಯ ಸೃಷ್ಟಿಕರ್ತನಾಗಿ ಬೆಳಗಿದ್ದಾನೆ. ತತ್ಫಲವಾಗಿ ಆದಿಪುರಾಣವು ಪರಮೇಶ್ವರನ ದಿವ್ಯಸಾನಿಧ್ಯ ಹಾಗೂ ಸಾಕ್ಷಾತ್ಕಾರಕ್ಕೆ ಸಾಧನದ ಸೋಪಾನವಾಯಿತು. ಕಾವ್ಯಾಸ್ವದನೆಯ ಮೂಲಕ ಭಗವದ್ಭಕ್ತಿಯನ್ನೂ, ತ್ರಿವರ್ಗಫಲವನ್ನೂ, ರಸತುಷ್ಟಿಯನ್ನೂ ಪಡೆಯಲು ಅಧ್ಯಯನದಿಂದ ನಮಗೆ ಸಾಧ್ಯವಾಗುತ್ತದೆ.

ವೇದ-ವೇದಾಂತಶಾಸ್ತ್ರಗಳಲ್ಲಿ ನಿಷ್ಣಾತನಾಗಿದ್ದ ಪಂಪನು ತನ್ನ ಕುಟುಂಬದ ಧರ್ಮತತ್ತ್ವಗಳನ್ನು ಮನಸಾರೆ ಪಾಲಿಸುತ್ತಿದ್ದು, ಪೂರ್ಣಾಭಿಮಾನವನ್ನು ಹೊಂದಿದ್ದನಲ್ಲದೇ ಜೈನಮತದಲ್ಲಿ ಸರ್ವೋತ್ಕೃಷ್ಟತೆಯನ್ನು ಅಪಾರವಾಗಿ ನಂಬಿದ್ದನು. ಇವನಲ್ಲಿ ವೈದಿಕ ಮತ್ತು ಜೈನಮತಗಳೆರಡರ ಸಂಸ್ಕಾರವೂ ಸಮನಾಗಿ ಬೆರೆತಿತ್ತೆಂಬುದು ಅವನ ಜೀವನದಲ್ಲಿಯೂ, ಕಾವ್ಯಗಳಲ್ಲಿಯೂ ಲೋಕೋತ್ತರಾನುಭೂತಿಯೊಂದಿಗೆ ಸ್ಪಷ್ಟವಾಗುತ್ತದೆ. ಪಂಪನ 'ಆದಿಪುರಾಣ'ದಲ್ಲಿ ಪುರುದೇವನ ಒಂಬತ್ತು ಜನ್ಮಗಳ ಕಥೆಯಿದ್ದು, ಪುರುದೇವನ ಜನನ, ಬಾಲ್ಯ, ಶಿಕ್ಷಣ, ಯೌವನ, ವಿವಾಹ, ರಾಜ್ಯಭಾರ,

ವೈರಾಗ್ಯ, ತಪಸ್ಸು, ಕೇವಲಜ್ಞಾನ, ಸಮವಸರಣಗಳ ವರ್ಣನೆಯಿದೆ. ಪುರುದೇವ ಅಥವಾ ಆದಿದೇವನು ಪಡೆದ ಒಂಬತ್ತು ಜನ್ಮಗಳ ಸಂಗ್ರಹವನ್ನೂ ಕವಿ ನೀಡಿದ್ದಾನೆ. ಪುರಾಣದ ಚೌಕಟ್ಟಿನ ಮಧ್ಯದಲ್ಲೂ ಕವಿ ಹಲವಾರು ಸುಂದರ ರಸಮಯ ಸನ್ನಿವೇಶಗಳನ್ನು ಅಳವಡಿಸಿದ್ದಾನೆ. ಪಂಪನಿಗಿಂತ ಹಿಂದಿನ ಕವಿಗಳಾರಾದರೂ ಮಹಾಭಾರತವನ್ನಾಧರಿಸಿ ಕಾವ್ಯಗಳನ್ನು ರಚಿಸಿರಬಹುದಾದರೂ, ಹಿಂದಿನ ಕಾವ್ಯಗಳ ಅನುಪಲಬ್ಧತೆಯಿದ್ದು; ಇಡೀ ಮಹಾಭಾರತದ ಕಥೆಯನ್ನು ಒಟ್ಟು ಸ್ವರೂಪವನ್ನಾಗಿ ರಚಿಸಿರುವುದು ಇಲ್ಲಿಯೇ. ವ್ಯಾಸರ ಮಹಾಭಾರತವಲ್ಲದೇ ಜೈನಸಂಪ್ರದಾಯದ ಭಾರತ ಕಥೆಗಿಂತ ವ್ಯಾಸಭಾರತದ ಕಥೆಯನ್ನೇ ಹೆಚ್ಚು ಅನುಸರಿಸಿರುವುದು ಆತನ ಸಾಹಿತ್ಯದೆಡೆಗಿನ ವಿಶಾಲಮನೋಭಾವವನ್ನು ಸೂಚಿಸುತ್ತದೆ. ಇದರಿಂದ ಕವಿಗಿದ್ದ ಅಲೌಕಿಕ ಮತ್ತು ಲೌಕಿಕ ಕಾವ್ಯಾಸಕ್ತಿ ತಿಳಿಯುತ್ತದೆ. ಅಂದರೆ, 'ಆದಿಪುರಾಣ'ದಲ್ಲಿ ಜಿನಾಗಮನವಿರುವ ಅಲೌಕಿಕತೆಯೂ; 'ಪಂಪಭಾರತ'ದಲ್ಲಿ ಲೌಕಿಕತೆಯ ವಸ್ತುವಿಷಯವನ್ನೂ ಆಸ್ವಾದಿಸುವಂತೆ ರಚಿಸಿದ್ದಾನೆ. ಭಾರತಕಾವ್ಯವು ಲೌಕಿಕತೆಯನ್ನು ಮೆರೆಸುವಂತಹದಗಿದ್ದು, ಇಲ್ಲಿ ಜೈನಧರ್ಮದ ಶ್ರೇಷ್ಠತೆ ಅಥವಾ ಧಾರ್ಮಿಕ ವಿವರಣೆಗೆ ಆದ್ಯತೆ ನೀಡಿಲ್ಲ. ಈ ಎಲ್ಲಾ ಮಹತ್ತ್ವವನ್ನೂ 'ಆದಿಪುರಾಣ'ಕ್ಕೆ ನೀಡಲಾಗಿದೆ. ಆದರೆ, ತನ್ನ ಗರ್ವಾತೀತ ಕಾವ್ಯನಿಷ್ಠೆಯನ್ನು ಭಾರತಕಾವ್ಯದಲ್ಲಿ 'ವ್ಯಾಸ ಮುನೀಂದ್ರ ರುಂದ್ರ ವಚನಾಮೃತವಾರ್ಧಿಯನೀಸುವೆಂ ಕವಿವ್ಯಾಸನೆನ್ ಎಂಬ ಗರ್ವಮೆನಗಿಲ್ಲ" ಎಂಬ ವಿನಯದಿಂದ ಅರುಹಿದ್ದಾನೆ. ಹೀಗೆ, ಪಂಪನು ತುಂಬಾ ಪ್ರಸಂಗಗಳನ್ನು ಸಂಕ್ಷೇಪವಾಗಿ ಹೇಳಿದ್ದರೂ ಶ್ರೇಷ್ಠರೀತಿಯಲ್ಲಿ ವರ್ಣಿಸಿದ್ದಾನೆ. ಆದ್ದರಿಂದಲೇ ತೀ.ನಂ.ಶ್ರೀಕಂಠಯ್ಯನವರು "ವಿಕ್ರಮಾರ್ಜುನವಿಜಯವು ಕನ್ನಡದ ಕನ್ನಡಿಯಲ್ಲಿ ಚಿಕ್ಕದಾಗಿ ಬಿದ್ದ ವ್ಯಾಸಭಾರತದ ನೆರಳಲ್ಲ; ಅಲ್ಲಿಯ ಚಿನ್ನವನ್ನು ಶೋಧಿಸಿ ತಂದು ಹೊಸದಾಗಿ ಎರಕ ಹೊಯ್ದು ಒಪ್ಪವಿಟ್ಟು ನಿಲ್ಲಿಸಿದ ನೂತನ ಪುತ್ಥಳಿ ಅದು" ಎಂದು ಪ್ರಶಂಸಿಸಿದ್ದಾರೆ. ಅಗತ್ಯ ಕಡೆಗಳಲ್ಲಿ ವಿವರಣೆಯನ್ನು ಮೊಟಕುಗೊಳಿಸುವ ಮೂಲಕ ತನ್ನನ್ನು 'ಹಿತಮಿತಮೃದುವಚನನ್' ಎಂದು ಕರೆದುಕೊಂಡಿರುವುದು ಸಾರ್ಥಕವೆನಿಸಿದೆ. ಜೊತೆಗೆ ಕವಿ ತನ್ನ ಸ್ವಂತ ಮನೋಭಾವವನ್ನು ಕಾವ್ಯದಲ್ಲಿ ಪ್ರತ್ಯಕ್ಷವಾಗಿಯೂ, ಪರೋಕ್ಷವಾಗಿಯೂ ಮೂಡಿಸುವುದರ ಮೂಲಕ ಲೌಕಿಕತೆಯನ್ನು ವಿವರಿಸಿದ್ದಾನೆ (ಅರ್ಜುನನ ದಿಗ್ವಿಜಯ, ಪ್ರಕೃತಿ ವರ್ಣನೆ, ರಸಾನುಭೂತಿಯನ್ನುಂಟು ಮಾಡುವ ಕಾವ್ಯ ಸೌಂದರ್ಯ ಇತ್ಯಾದಿ). ಪಂಪನ ಭಾರತಕಾವ್ಯವು ಲೌಕಿಕಕಾವ್ಯವಾದ್ದರಿಂದ ಶ್ರೀಕೃಷ್ಣನ ಪಾತ್ರಚಿತ್ರಣವು ಸಾಮಾನ್ಯಪಾತ್ರದಂತೆ ಚಿತ್ರಿತವಾಗಿದೆ ಎನ್ನಬಹುದು. ತನ್ನ ಕಾವ್ಯದ ಕೊನೆಗೆ ಭಾರತದ ವಿವಿಧ ಪಾತ್ರಗಳ ವೈಶಿಷ್ಟ್ಯವನ್ನು ತಿಳಿಸುವಾಗ "ಚಲದೊಳ್ ದುರ್ಯೋಧನಂ, ನನ್ನಿಯೊಳಿನತನಯಂ, ಗಂಡಿನೊಳ್ ಭೀಮಸೇನಂ. . . . . . . . . . . ." ಎಂಬಲ್ಲಿ ಕೃಷ್ಣನ ವರ್ಣನೆಯಿಲ್ಲದಿದ್ದರೂ, ಅವನನ್ನು ಲೌಕಿಕ ಪಾತ್ರಧಾರಿಯಂತೆ ಪರಿಗಣಿಸಿದ್ದರೂ, ಸಮಸ್ತಲೋಕನಾಟಕದ ಶ್ರೇಷ್ಠ ಸೂತ್ರಧಾರನಾದ್ದರಿಂದ ಎಲ್ಲೆಡೆಯೂ ವ್ಯಾಪಿಸಿದ್ದಾನೆಂದೂ ಅನ್ವಯಿಸಿದ್ದಾನೆ.

ಜೈನಪುರಾಣಗಳು ಮೊದಲು ಪ್ರಾಕೃತ, ಅಪಭ್ರಂಶ ಮತ್ತು ಸಂಸ್ಕೃತಭಾಷೆಗಳಲ್ಲಿ ರಚನೆಯಾಗಿ, ಮುಂದೆ ವಿವಿಧ ದೇಶೀಭಾಷೆಗಳಲ್ಲಿ ಬೆಳೆದು ಬಂದವೆಂದು ತಿಳಿದುಬರುತ್ತದೆ. ವೈದಿಕಪುರಾಣಗಳ ಹಿನ್ನೆಲೆಯಲ್ಲಿ ಜೈನಪುರಾಣಗಳು ಬೆಳೆದು ಬಂದಿದ್ದು; ವೇದೋಪನಿಷತ್ತುಗಳೇ ಮೊದಲಾದ ವೈದಿಕಸಾಹಿತ್ಯಕ್ಕೆ ಸಂಬಂಧಿಸಿದ್ದು ವೈದಿಕಪುರಾಣವಾದರೆ; ಶಲಾಕಪುರುಷರು ಬೆಳಗಿದ ಧರ್ಮಸಂಬಂಧದ ನೆಲೆಯನ್ನು ಜೈನಪುರಾಣವೆಂದೂ ವಿದಿತವಾಗುತ್ತದೆ. ಇನ್ನು ವೈದಿಕ ಮತ್ತು ಅವೈದಿಕ ಪುರಾಣಗಳ ತುಲನಾತ್ಮಕಾಧ್ಯಯನದಲ್ಲಿ ನೋಡಿದಾಗ, ಭಿನ್ನ ಭಿನ್ನ ತಾತ್ವಿಕ ನೆಲೆಗಳು ಗೋಚರಿಸುತ್ತವೆ. ವೈದಿಕ ತಾತ್ವಿಕ ನೆಲೆಯಲ್ಲಿ ಮನುಷ್ಯನ ಹಲವಾರು ವರ್ಷಗಳ ತನ್ನ ಕರ್ಮಕ್ಕನುಸಾರವಾಗಿ ಮನುಷ್ಯನಾಗಿ ಅಥವಾ ಜೀವಕೋಟಿಯಲ್ಲಿ ಹುಟ್ಟಿ ಬರುತ್ತಾನೆ. ಅವನಿಗೆ ದೇವರಾಗುವ ಅವಕಾಶವಿಲ್ಲ; ಅಂದರೆ, ಒಂದರ್ಥದಲ್ಲಿ ಆರೋಹಣ ಸ್ಥಿತಿಯಿಲ್ಲ. ಆದರೆ, ಜೈನಧರ್ಮದ ತಾತ್ವಿಕ ನೆಲೆಯಲ್ಲಿ ಈ ನಂಬಿಕೆ ಭಿನ್ನವಾಗುತ್ತದೆ. ತಿರ್ಯಕ್ ಸ್ಥಿತಿಯಿಂದ ಅನುಕ್ರಮವಾಗಿ ದೇವನಾಗುವ ಆರೋಹಣ ಸ್ಥಿತಿಗೆ ಅವಕಾಶ ಕಲ್ಪಿಸಲಾಗಿದೆ. ಹೀಗೆ, ಉಪಾಧ್ಯಾಯ, ಸಾಧು, ಸಿದ್ಧ ಮತ್ತು ಅರ್ಹಂತ ನೆಲೆಗೆ ಅವನು ತಲುಪಿದ ಮೇಲೆ ದೇವನಾಗಬಹುದು. ಮನುಷ್ಯನು ದೇವನಾಗಬಹುದೆಂಬ ನೆಲೆಯು ವೈದಿಕಪುರಾಣಗಳಲ್ಲಿಲ್ಲ. ಜನ್ನನು ತನ್ನ 'ಅನಂತನಾಥಪುರಾಣ'ದಲ್ಲಿ "ಮುನಿಮಾರ್ಗೋಕ್ತಿ ಪುರಾಣಪದ್ಧತಿಗೆ ಲೋಕಾಕಾರಮುಂ. . . . . . . . . . ." ಎಂದು ಮುನಿಪ್ರೋಕ್ತ ಪುರಾಣವು ಪಂಚಾಂಗಗಳಿಂದಲೂ; ಕವಿಪ್ರೋಕ್ತ ಪುರಾಣವು ಅವುಗಳ ಜೊತೆಗೆ ದೇಶ, ನಗರ, ರಾಜ್ಯೋತ್ಸವ್ಯಾಖ್ಯಾನಗಳಿಂದ ಕೂಡಿರುತ್ತವೆಂದು ತಿಳಿಸಿದ್ದಾನೆ.

ಸಾಹಿತ್ಯ ಮತ್ತು ಪುರಾಣಗಳ ನಡುವಿನ ಅಂತಃಸಂಬಂಧಗಳಲ್ಲಿ ಸೂಕ್ಷ್ಮನೆಲೆಗಳಿವೆ. ಇವು ಕಾಲ–ದೇಶಗಳಲ್ಲಿ ಸಂಸ್ಕೃತಿಯಲ್ಲುಂಟು ಮಾಡುವ ಸಂರಚನೆ ಮತ್ತು ಪರಿಣಾಮಗಳು ಮುಖ್ಯವಾಗುತ್ತವೆ. ಸಾಹಿತ್ಯಮುಖೇನ ಕಾಲ–ದೇಶಗಳ ಸ್ವರೂಪ ಅರಿಯುವುದು ಇಲ್ಲಿ ವಿದಿತವಾಗುತ್ತದೆ.

***ವೈದಿಕಪುರಾಣ ಮತ್ತು ಸಾಹಿತ್ಯ :–**

ವೈದಿಕಪುರಾಣವು ಸಾಹಿತ್ಯಕೃತಿಗಳಿಗೆ ದೊಡ್ಡ ಅವಕಾಶವನ್ನು ನೀಡಿದ್ದು, ಸಂಸ್ಕೃತಸಾಹಿತ್ಯ ಕೃತಿಗಳು ಒಂದಿಲ್ಲೊಂದು ನೆಲೆಯಲ್ಲಿ ವೈದಿಕಪುರಾಣಗಳೊಳಗಿನ ವಸ್ತು, ಪ್ರತಿಮೆ, ರೂಪಕ, ಪಾತ್ರ, ಸನ್ನಿವೇಶ ನಿರ್ಮಾಣಗಳನ್ನು ಯಥೇಚ್ಛವಾಗಿ ನೀಡಿರುತ್ತವೆ. ಇದರೊಂದಿಗೆ ಪುರಾಣದ ಪ್ರಧಾನ ಆಶಯವಾದ ನೈತಿಕಮೌಲ್ಯಗಳ ರೂಪವು ಸಾಹಿತ್ಯಕೃತಿಗಳ ಅಂತರ್ಭಾಗವಾದುದು ಗಮನೀಯಾಂಶ. ವೈದಿಕಪುರಾಣಗಳಲ್ಲಿ ಭಾಗವತಕ್ಕೆ ಮಹತ್ತ್ವದ ಆದ್ಯತೆಯಿದ್ದು, ಭಾರತೀಯ ಧರ್ಮವಿಕಾಸದಲ್ಲಿ ಭಾಗವತದ ವ್ಯಾಪಕವಾದ ಪ್ರಭಾವವಿರುವುದು ನಿಶ್ಚಿತ. ಭಾರತೀಯಸಾಹಿತ್ಯದಲ್ಲಿನ ಮಾಧುರ್ಯ, ಸಾರಸತ್ವ, ಹೃದಯಾಹ್ಲಾದಕತ್ವವೆಲ್ಲವೂ ಶ್ರೀಭಾಗವತದ ಪ್ರಭಾವವೇ ಆಗಿದೆ. ಇಂತಹ ಮಾಧುರ್ಯಾದಿ ಅಂಶಗಳು ಜಯದೇವನ 'ಗೀತಗೋವಿಂದ' ದಂತಹ ಕೃತಿಗಳಲ್ಲಿ ಒಡಮೂಡಿದೆ. ಇಲ್ಲಿ ವಿರಹ, ತಾಪ, ಅಸೂಯೆ, ಮುಕ್ತಪ್ರೇಮ, ನಿರ್ಭೀತ ವಾತಾವರಣ, ಪ್ರಕೃತಿಯ ತಾರತಮ್ಯಗಳೆಲ್ಲಾ ಅನೇಕ ರೂಪಕಗಳಾಗಿ ಮೆರೆದು ನಿಲ್ಲುವುದನ್ನು 'ಗೀತಗೋವಿಂದ'ದಲ್ಲಿ ಗಮನಿಸಬಹುದು. "ವಿಹರತಿ ಹರಿರಿಹ ಸರಸವಸಂತೇ; ಚಂದನ ಚರ್ಚಿತ ನೀಲಕಲೇವರ ಪೀತವಸನ ವನಮಾಲೀ. . . . . . . ." ಎಂಬಲ್ಲಿ ಶ್ರೀಕೃಷ್ಣನ ಮನೋಹರ ಚಿತ್ರಣ ಗೋಚರಿಸುತ್ತದೆ. ಇಲ್ಲಿ ಕೃಷ್ಣ ಪುರಾಣದಲ್ಲಿಯಮ್ತೆ ದೇವನಾಗಿರದೇ; ಮಾನುಷವಾಗಿ ಲೀಲಾರೂಪಕವಾಗಿ ಬೆಳೆಯುತ್ತಾನೆ. ಭಾಗವತದ ಕೃಷ್ಣ ಹತ್ತಾರು ರೂಪಕಗಳಾಗಿ ನಿಲ್ಲಬಲ್ಲ ಅನ್ನುವುದಕ್ಕೆ ಇದೊಂದು ಪ್ರಧಾನ ಸಾಕ್ಷಿ. ಹೀಗೆ, ಮಧ್ಯಕಾಲೀನ ಕವಿಗಳ ಪದಗಳಲ್ಲಿರುವ ಲಾಲಿತ್ಯ ಮತ್ತು ರಸನಿರ್ಭರತೆಗಳು ಭಾಗವತದ ಗಾಢವಾದ ಅಧ್ಯಯನ ಫಲವೆಂದು ವಿದಿತವಾಗುತ್ತದೆ. ಹೀಗೆ, ಸಾಹಿತ್ಯಕೃತಿಯಲ್ಲಿನ ರಸಧ್ವನಿಗಳ ಛಾಪು, ಪರಿಕಲ್ಪನೆಗೆ ರಕ್ತ–ಮಾಂಸಗಳನ್ನು ತುಂಬುವುದೇ ಪುರಾಣಗಳ ನೆಲೆಯಿಂದ. ಪುರಾಣ ಜಗತ್ತು ಸಾಹಿತ್ಯ ಜಗತ್ತಿಗೆ ನೀಡುವ ಕೊಡುಗೆ ಸರ್ವಥಾ ಪ್ರಧಾನವಾದುದು. ಉದಾಹರಣೆಗೆ ಪುರಾಣ ಜಗತ್ತಿನ ಕೃಷ್ಣ–ಬಲರಾಮರು ಸಾಹಿತ್ಯ ಜಗತ್ತಿನಲ್ಲಿ ನೂರಾರು ರೂಪಕಗಳಾಗಿ ಕಾಣಿಸಿಕೊಳ್ಳುತ್ತಾರೆ, ವಿಜೃಂಭಿಸುತ್ತಾರೆ. ಅಂದರೆ, ಪುರಾಣ ಜಗತ್ತಿನ ಶ್ರೀಕೃಷ್ಣನು ಹತ್ತಾರು ಗೀತಕಾವ್ಯಗಳು, ಪ್ರಗೀತಗಳು, ಮುಕ್ತಕಗಳು ಅಪೂರ್ವ ಅಕ್ಷಯಸ್ತೋತ್ರಗಳಾಗಿ ಹೊರಹೊಮ್ಮಿವೆ.

ವೈದಿಕಪುರಾಣಗಳಲ್ಲಿ ಭಾಗವತಪುರಾಣ ಮತ್ತು ವಿಷ್ಣುಪುರಾಣಗಳು

ಮೂಲಪಠ್ಯಗಳಾಗಿ ಕೆಲಸ ಮಾಡುತ್ತವೆ. ಇಲ್ಲಿ ಮೂರ್ತಜಗತ್ತು ಅಮೂರ್ತಜಗತ್ತಿನೊಂದಿಗೆ ಸೆಣಸುವುದನ್ನು ಕಾಣಬಹುದು. ಮೂಲಪಠ್ಯದ ಘನೀಭೂತಾಕೃತಿಯು ಸೂಕ್ಷ್ಮಪಠ್ಯದಲ್ಲಿ ಬಹುಮುಖೀ ಆಕೃತಿಗಳಾಗಿ ನೆಲೆ ನಿಲ್ಲುತ್ತವೆ. ಇಲ್ಲಿ ಮಾಘನ 'ಶಿಶುಪಾಲವಧ', ಲೀಲಾಶುಕನ 'ಶ್ರೀಕೃಷ್ಣಕರ್ಣಾಮೃತ'ದಂತಹ ಕೃತಿಗಳನ್ನು ಹೆಸರಿಸಬಹುದು. ಇಲ್ಲೆಲ್ಲಾ ಪುರಾಣದಲ್ಲಿಲ್ಲದ ವಿಶೇಷ ಸಾಮಗ್ರಿಗಳನ್ನು, ವರ್ತಮಾನಕಾಲದ ಸಂದರ್ಭದಲ್ಲಿ ಬಳಸಿಕೊಂಡಿರುವುದೂ ತಿಳಿಸುತ್ತದೆ. ಪುರಾಣ ಪ್ರಸಿದ್ಧವಾದ ಪುರೂರವ–ಊರ್ವಶೀಯರ ಆಖ್ಯಾನ ಕಾಳಿದಾಸನ 'ವಿಕ್ರಮೋರ್ವಶೀಯ'ದಲ್ಲಿ ವಿಶೇಷ ಆಕರ್ಷಣೆ ಪಡೆದಿದೆ. ಈ ಕಥೆಯು ವೇದಗಳಿಂದ ಹಿಡಿದು ಹರಿವಂಶ, ವಿಷ್ಣುಪುರಾಣ, ಮತ್ಸ್ಯಪುರಾಣಗಳಲ್ಲೂ ಲಭ್ಯವಿದ್ದು, ಕಾಳಿದಾಸನು ಅಗತ್ಯ ಪದಾರ್ಥಗಳನ್ನು ಇಲ್ಲಿಂದ ಸ್ವೀಕರಿಸಿದ್ದಾನೆ. ತನ್ನ 'ಅಭಿಜ್ಞಾನಶಾಕಂತಲ'ದಲ್ಲೂ ಶಾಪಪ್ರಸಂಗದ ಮೂಲಕ ಕವಿ ವಿಶೇಷ ಪ್ರೌಢಿಮೆ ಮೆರೆದಿದ್ದಾನೆ. 'ಸ್ಕಾಂದಪುರಾಣ' ಮತ್ತು 'ಶಿವಪುರಾಣ'ದ ಆಕರವನ್ನು ಪಡೆದಿರುವ 'ಕುಮಾರಸಂಭವ'ದಲ್ಲಿ ಸ್ಕಂದನ ಜನನ ವೃತ್ತಾಂತವೇ ಪ್ರಧಾನವಸ್ತುವಾಗಿದೆ. ಪುರಾಣದಲ್ಲಿ ಹಲವೆಡೆ ನೀರಸವಾಗಿರುವ, ಕೃತಕವಾಗಿರುವ ಅಂಶವು ಸಾಹಿತ್ಯದಲ್ಲಿ ಹೆಚ್ಚು ಉಜ್ವಲವೂ, ರಮಣೀಯವೂ ಆಗಿ ಮೂಡಿ ಬಂದಿದೆ. ಪುರಾಣದ ವಸ್ತುವೊಂದು ಅನನ್ಯ ಕಮನೀಯಕಾವ್ಯವಾಗುವ ಪ್ರಕ್ರಿಯೆ ಇಲ್ಲಿ ನಡೆದಿದೆ. ಕಾಳಿದಾಸನ ರಚನೆಯಲ್ಲಿ ದೈವಿಕ ನೆಲೆಯ ಪ್ರತಿನಿಧಿಗಳೂ ಸಾಮಾನ್ಯ ಮತ್ತು ಅಸಾಮಾನ್ಯ ನೆಲೆಗೆ ಬರುವಂತೆ, ಹಿಮಾಲಯದಂತಹ ಒಂದು ವಸ್ತುವಿಶೇಷ/ವಸ್ತುಪ್ರತೀಕವೂ "ಅಸ್ತ್ಯುತ್ತರಸ್ಯಾಂ ದಿಶಿದೇವತಾತ್ಮಾ. . . . ." ಅದ್ಭುತಪ್ರತಿಮೆ/ಪ್ರತಿಮಾಮೂರ್ತಿಯಾಗಿರುವುದು ಗಮನೀಯ ಸಂಗತಿ. ಸಾಹಿತ್ಯವು ಪುರಾಣವನ್ನು ತನ್ನ ತೆಕ್ಕೆಗೆ ತೆಗೆದುಕೊಂಡು, ಪ್ರಾಚೀನವಾದ ವಾಗ್ರೂಢಿಯಲ್ಲಿನ ಕಥೆಯನ್ನು, ಅದರಲ್ಲಿನ ನಂಬಿಕೆ ಮತ್ತು ವ್ಯಕ್ತಿಚಿತ್ರಣವನ್ನು ಸೆರೆ ಹಿಡಿಯುತ್ತದೆ. ಉದಾಹರಣೆಗೆ: 'ವಾಲ್ಮೀಕಿರಾಮಾಯಣ'. ನಂತರದ ಕವಿಗಳು ಮೂಲಕಥೆಯನ್ನು ಮತ್ತಷ್ಟು ವಿಸ್ತರಿಸಿ, ಪೋಷಿಸಿ, ಹೊಸ ಹೊಸ ಸಾಧ್ಯತೆಗಳನ್ನು ಪ್ರತಿಭಾಭೂಮಿಕೆಯಲ್ಲಿ ಪವಾಡಸದೃಶವಾದ ಕಲಾಕೃತಿಯಾಗಿ ಮಾರ್ಪಡಿಸಿದ್ದಾರೆ. ಉದಾಹರಣೆಗೆ: ಕುವೆಂಪು ಅವರ 'ಶ್ರೀರಾಮಾಯಣದರ್ಶನಂ', ಪು.ತಿ.ನ ಅವರ 'ಅಹಲ್ಯೆ'.

ಪುರಾಣಗಳ ವರ್ಣನಾಶೈಲಿಯಲ್ಲಿನ ರೂಪಕಕಥನವೇ ಮುಂದಿನ ಕಾವ್ಯಗಳಿಗೆ ಪರ್ಯಾಯವಾಗಿ ನೆರವಾದವು. ಉದಾಹರಣೆಗೆ: ಮಹಾಕವಿ ಕಾಳಿದಾಸನ 'ರಘುವಂಶ'ಕ್ಕೆ 'ವಾಲ್ಮೀಕಿರಾಮಾಯಣ'. 'ಕುಮಾರಸಂಭವ'ಕ್ಕೆ 'ವಾಯು, ಶಿವ ಮತ್ತು ಸ್ಕಂದಪುರಾಣಗಳು', ಪಂಪನ 'ಆದಿಪುರಾಣ'ಕ್ಕೆ ಜಿನಸೇನರ 'ಪೂರ್ವಪುರಾಣ'ವು ಮೂಲಪಠ್ಯದಿಂದ ಸೂಕ್ಷ್ಮಪಠ್ಯಕ್ಕೆ ದಾಟುವ ಪ್ರಕ್ರಿಯೆಯನ್ನು ಗಮನಿಸಬಹುದು.

***ಜೈನಪುರಾಣ ಮತ್ತು ಸಾಹಿತ್ಯ :–**

ಜೈನಪುರಾಣಗಳ ರಚನೆಗಳನ್ನು ಗಮನಿಸಿದಾಗ ಜಿನಪಂಡಿತರು ಆಯಾ ಕಾಲಘಟ್ಟದ ಸಾಮಾನ್ಯಜನರ ಭಾಷೆಗಳಿಗೆ ಪ್ರಾಧ್ಯಾನತೆ ನೀಡಿ ಜೈನಧರ್ಮದ ಶ್ರೇಷ್ಠಕೃತಿಗಳನ್ನು ರಚಿಸಿದ್ದಾರೆ. ಭಿನ್ನ ಭಿನ್ನ ಪ್ರದೇಶಗಳಲ್ಲಿ ಸಂಚರಿಸುತ್ತಾ ಆಯಾ ದೇಶೀಯ ಭಾಷೆಗಳಲ್ಲಿ ಜೈನಧರ್ಮದ ಗ್ರಂಥಗಳನ್ನು ರಚಿಸುತ್ತಾ ಬಂದಿದ್ದರಿಂದಲೇ ನೂರಾರು ಜೈನಪುರಾಣಗಳ ರಚನೆ ಸಾಧ್ಯವಾಯಿತು. ಒಂದು ಹಂತದಲ್ಲಿ ವೈದಿಕಪುರಾಣದ ಅನೇಕ ದೇವತೆಗಳನ್ನು ತಮ್ಮ ಪುರಾಣಕೃತಿಗಳ ಮುಖ್ಯಪಾತ್ರವನ್ನಾಗಿ ತೆಗೆದುಕೊಂಡರು. ಶ್ರೀರಾಮ, ಲಕ್ಷ್ಮಣ, ಶ್ರೀಕೃಷ್ಣತಂತಹ ಘನವಾದ ಪಾತ್ರಗಳೂ ಜೈನಪುರಾಣದಿಂದಲೇ ಹೊರಹಮ್ಮಿದವು. ಜಿನಸೇನರ ಕೃತಿಯಲ್ಲಿ ತಮ್ಮವರೆಗೆ ಲಭ್ಯವಾದ ಸಾಮಗ್ರಿಗಳನ್ನಾಧರಿಸಿ ಬೃಹತ್ಕೃತಿಯ ರಚನೆಯಾಗಿದೆ ಎಂದು ತಿಳಿಸಲಾಗಿದೆ. ಇನ್ನು ಭಾರತೀಯಸಾಹಿತ್ಯ ಸಂದರ್ಭದಲ್ಲಿ ಹೇಳುವುದಾದರೆ ಜಿನಸೇನ ಮತ್ತು ಗುಣಭದ್ರರ ನಂತರ ಸಂಸ್ಕೃತವೂ ಸೇರಿದಂತೆ ಅನೇಕ ದೇಶೀಭಾಷೆಗಳಲ್ಲಿಯೂ ಜೈನಕೃತಿಗಳು ಹೊರಬಂದವು. ಹೀಗಿದ್ದರೂ ಜೈನಪುರಾಣದ ಸಂದರ್ಭದಲ್ಲಿ ಕಾಲದ ಒತ್ತಡದ ಜೊತೆಗೆ ಸಾಹಿತ್ಯಕ್ಕಿಂತ ಅಥವಾ ಕಲಾಕೇಂದ್ರಿತ ಆರಾಧನೆಗಿಂತ, ಧಾರ್ಮಿಕ ಹಾಗೂ ಅತಿಮಾನುಷ ಆರಾಧನೆಯ ಮೂಲಸತ್ವವಾಗಿತ್ತೆಂದು ಅರಿವಾಗುತ್ತದೆ. ಇಲ್ಲಿ ರೂಪನಿಷ್ಠವೂ, ಆತ್ಮನಿಷ್ಠವೂ ಆದ ರಚನೆಯೆಡೆಗಿರುವ ಒಲವು ಸಾಹಿತ್ಯ ಜಗತ್ತಿನ ಆರಾಧನೆಗೆ ಸಲ್ಲಿಸಲಿಲ್ಲ ಎನ್ನಬಹುದು. ಈ ಮಧ್ಯೆಯೂ ಜಿನಸೇನಾಚಾರ್ಯರು ತಮ್ಮ 'ಪೂರ್ವಪುರಾಣ'ದ ಆರಂಭದಲ್ಲಿ ತಮ್ಮ ಕೃತಿಯನ್ನು ಕೇವಲ ಪುರಾಣವಾಗಿ ನೋಡದೆ; ಸಾಹಿತ್ಯವಾಗಿಯೂ ಸ್ವೀಕರಿಸಬೇಕೆಂಬ ಹಂಬಲವನ್ನು "ಪುರಾತನಂ ಪುರಾಣಂ ಸ್ಯಾತ್ ತನ್ಮಹನ್ಮಹದಾಶ್ರಯಾತ್. . . . . ." (ಇತಿ ಇಹ ಆಸೀತ್= ಇತಿಹಾಸ) ಎಂದು ವ್ಯಕ್ತಪಡಿಸಿದ್ದಾರೆ. ಇದರಿಂದ ಇಲ್ಲಿಯೂ ವೈದಿಕಪುರಾಣಗಳಂತೆ ಕಾವ್ಯ, ಶಾಸ್ತ್ರ ಸಂಬಂಧಿಯಾದ ಚರ್ಚೆಗಳು ಬೆಳೆದಿರಬಹುದೆಂದು ಊಹಿಸಬಹುದು.

ಪುರಾಣಗಳನ್ನು ಸಾಹಿತ್ಯದ ಸಂದರ್ಭದೊಡನೆ ಹೋಲಿಸಿ ನೋಡಬಹುದಾದ ಹುಮ್ಮಸ್ಸು ಮಧ್ಯಕಾಲೀನ ಕೃತಿಗಳಲ್ಲಿ ಕ್ಷೀಣವಾಗಿದ್ದು, ಆ ಕೃತಿಗಳು ಮುಖ್ಯವಾಗಿ ಧರ್ಮದ ಆಕೃತಿಯನ್ನು ಬಿಡಿಸುವಲ್ಲಿ ಪಾತ್ರವಹಿಸಿದ್ದವು. ಇಂತಹ ಆಕೃತಿಗಳ ರಚನೆ ದೇಶೀಸಾಹಿತ್ಯದಲ್ಲಿ ನಡೆಯಿತೇ ಹೊರತು, ಸಂಸ್ಕೃತ ಮತ್ತು ಪ್ರಾಕೃತಸಾಹಿತ್ಯ ಸಂದರ್ಭದಲ್ಲಿ ಸಾಧ್ಯವಾಗಲಿಲ್ಲ. ಇದಕ್ಕೆ ಕಾರಣ ರೂಪಕ, ಪ್ರತಿಮೆ, ಶಿಲ್ಪ, ಶೈಲಿಗಳನ್ನು ಪುರಾಣಗಳಿಂದ ತೆಗೆದುಕೊಂಡು ಮರುಸೃಷ್ಟಿ ಮಾಡಲು ಸಾಧ್ಯವಾಗದ್ದರಿಂದ. ಹೀಗೆ, ಭಾರತೀಯಸಾಹಿತ್ಯ ಸಂದರ್ಭದಲ್ಲಿ ವೈದಿಕಪುರಾಣಗಳಿಂದ ಮರುಸೃಷ್ಟಿ ಪಡೆದ ಸಾಹಿತ್ಯವೆನಿಸಲು ಸಾಧ್ಯವಾಗಲಿಲ್ಲ. ಉದಾಹರಣೆಗೆ:– ಗುಣಭದ್ರನ 'ಉತ್ತರಪುರಾಣ'ದಲ್ಲಿನ 'ನೇಮಿಸ್ವಾಮಿಚರಿತ'ವನ್ನಾಧರಿಸಿ ಹತ್ತಾರು ಕಾವ್ಯಗಳು ಮೂಡಿಬಂದವು.

***ವೈದಿಕ ಮತ್ತು ಜೈನಧರ್ಮದ ಸಮನ್ವಯತೆ :–**

ಋಷಭದೇವನು ಶ್ರೀವಿಷ್ಣುವಿನ ಅವತಾರವೆಂದೂ, ಭರತನು ಯೋಗಿಶ್ರೇಷ್ಠನೆಂದೂ ವಿಖ್ಯಾತರಾಗಿದ್ದು, ಇವರ ಚರಿತ್ರೆ ಮತ್ತು ಉಪದೇಶಗಳು ಜೈನಧರ್ಮದ ಸಾರವಾಗಿವೆ. ಬೌದ್ಧಧರ್ಮದಂತೆ ಜೈನಧರ್ಮವೂ ವೈದಿಕಧರ್ಮೋಕ್ತವಾದ ಯಜ್ಞಯಾಗಾದಿಗಳನ್ನೆದುರಿಸಿ ನಿಂತ ಸಂಸ್ಕಾರಕ ಧರ್ಮವೆಂದೂ, ಕಾಲಕ್ರಮೇಣ ಈ ಭಾವನೆಗಳು ಬಲಿತು ವೈದಿಕ ಯಜ್ಞಕರ್ಮಗಳನ್ನೊಪ್ಪದ ಅಹಿಂಸಾಪ್ರಧಾನವಾದ ಆದರೆ, ತೀವ್ರ ತಪಶ್ಚರ್ಯೆಯನ್ನನುಸರಿಸುವ ಧರ್ಮವೆನಿಸಿತು. ವೇದಗಳನ್ನೂ ಅವುಗಳಿಂದ ಪ್ರತಿಪಾದ್ಯವಾದ ಕರ್ಮಗಳನ್ನೂ ಜಗತ್ತಿನ ಸೃಷ್ಟಿ–ಸ್ಥಿತಿ–ಲಯಗಳಿಗೆ ಕರ್ತನಾದ ಈಶ್ವರನ್ನು ಒಪ್ಪದ ಕಾರಣ ಜೈನಮತವು ನಾಸ್ತಿಕವೆನಿಸಿದರೂ, ಜೀವನು ತನ್ನ ಕರ್ಮಕ್ಷಯವನ್ನು ಮಾಡಿಕೊಂಡು ಸಂಸಾರನಿರ್ಮುಕ್ತನಾಗಿ ಮುಕ್ತಿ ಪಡೆವನೆಂದೂ ಸಾರುವ ಮೂಲಕ ಜೈನಧರ್ಮವು ಆಸ್ತಿಕಧರ್ಮವೆಂದು ವಿದಿತವಾಗುತ್ತದೆ. ಒಟ್ಟಿನಲ್ಲಿ ಧರ್ಮಾವಲಂಬನೆಗೆ ಸಾಧಕವಾದ ಮುಖ್ಯತತ್ವಗಳಲ್ಲಿ ಜೈನಮತಕ್ಕೂ, ವೈದಿಕಧರ್ಮಕ್ಕೂ ಭಿನ್ನತೆಯಿದ್ದರೂ ಸಾಮ್ಯವುಂಟು. ಇಂತಹ ಧರ್ಮಸಮನ್ವಯಪ್ರಜ್ಞೆಯನ್ನು–

"ಆಕಾಶಾತ್ ಪತಿತಂ ತೋಯಂ ಯಥಾಗಚ್ಛತಿ ಸಾಗರಂ ।
ಸರ್ವದೇವನಮಸ್ಕಾರಃ ಕೇಶವಂ ಪ್ರತಿ ಗಚ್ಛತಿ ॥" ಎಂದೂ,
"ಯಂ ಶೈವಾಃ ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತಿನಃ
ಬೌದ್ಧಾಃ ಬುದ್ಧ ಇತಿ ಪ್ರಮಾಣಪಟವಃ ಕರ್ತೇತಿ ನೈಯಾಯಿಕಾಃ ।

ಅರ್ಹನ್ ಇತ್ಯಥ ಜೈನಶಾಸನರತಾಃ ಕರ್ಮೇತಿ ಮೀಮಾಂಸಕಾಃ
ಸೋ ಯಂ ವೋ ವಿದಧಾತು ವಾಂಛಿತಫಲಂ ತ್ರೈಲೋಕ್ಯನಾಥೋ ವಿಭುಃ॥"

ಎಂಬ ಐಕ್ಯಮಂತ್ರಗಳನ್ನು ಜ್ಞಾನಿಗಳು ಸಾರುವ ಮುಖೇನ ಪರಮಾತ್ಮನೆಂಬ ಏಕಧ್ಯೇಯವನ್ನು ಭಿನ್ನ ನಾಮಧೇಯಗಳಿಂದ ಸಾರಿದ್ದಾರೆ. ಸಂಸಾರಸಾಗರದ ಏರಿಳಿತಗಳಿಂದ ಜೀವನನ್ನು ಪಾರು ಮಾಡುವ ಪರಮಶಕ್ತನನ್ನೂ ಸಾಕ್ಷಾತ್ಕರಿಸಿಕೊಳ್ಳಲ್ಲು ಧರ್ಮವು ಸರ್ವಸಾಧಕವೆಂದು ವಿಹಿತವಾಗುತ್ತದೆ. ಪೂರ್ವಾಪರವಿರೋಧವಿಲ್ಲದ, ದೋಷರಹಿತವೂ ಆದ ಸಕಲಗುಣನಿಧಿಯ ಸಾನಿಧ್ಯಕ್ಕೆ ಸಾಧನವೇ ಧರ್ಮವೆಂದು ಸ್ಪಷ್ಟವಾಗುತ್ತದೆ. ಒಟ್ಟಿನಲ್ಲಿ ಧರ್ಮ-ಸಂಸ್ಕೃತಿ-ಸಾಹಿತ್ಯಗಳು ಸಮಾಜಜೀವನದ ಒಟ್ಟು ವಿನ್ಯಾಸವನ್ನು, ಚೌಕಟ್ಟನ್ನು ಮುರಿಯದಂತೆ ಕಾಪಾಡುವಲ್ಲಿ ಪ್ರಧಾನ ಪಾತ್ರವಹಿಸುತ್ತವೆ.

***ಪರಾಮರ್ಶನ ಗ್ರಂಥಗಳು***

೧. 'ಸಾಹಿತ್ಯ ಮತ್ತು ಪುರಾಣ'- ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ- ಉದಯ ಪ್ರಕಾಶನ, ರಾಜಾಜಿನಗರ, ಬೆಂಗಳೂರು- ೧೯೯೩ (ಐ.ಎಸ್.ಬಿ.ಎನ್. ೯೭೮-೮೧-೯೩೦೭೬-೭-೬)
೨. 'ಚಂಪೂ ಕವಿಗಳು'- ಪಿ. ವಿ. ನಾರಾಯಣ- ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು- ೧೯೭೫ (ಐ.ಎಸ್.ಬಿ.ಎನ್. ೯೭೮-೮೧-೨೮೦-೧೦೯೪-೧)
೩. 'ಪಂಪ ಮಹಾಕವಿ ವಿರಚಿತ ಆದಿಪುರಾಣಂ' (ಗದ್ಯಾನುವಾದ) – ಕೆ.ಎಲ್. ನರಸಿಂಹಶಾಸ್ತ್ರಿ- ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು- ೨೦೧೯
೪. 'ವೈದಿಕ ಸಾಹಿತ್ಯ ಚರಿತ್ರೆ'- ಡಾ. ಎನ್.ಎಸ್. ಅನಂತರಂಗಾಚಾರ್- ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು- ೧೯೬೮
೫. 'ಸಂಸ್ಕೃತ ಸಾಹಿತ್ಯದ ಇತಿಹಾಸ'- ಆಚಾರ್ಯ ಬಲದೇವ ಉಪಾಧ್ಯಾಯ(ಮೂಲ ಲೇಖಕರು), ಶ್ರೀ. ಎಸ್. ರಾಮಚಂದ್ರಶಾಸ್ತ್ರೀ (ಅನುವಾದಕರು)- ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು- ೨೦೦೩